ಸಂಪುಟ: 01 ಸಂಚಿಕೆ: 85 ಪುಟ: 04 ಬೆಲೆ: 02 ಬುಧವಾರ ಸೆಪ್ಟೆಂಬರ್ 09 2026 ಮೊ: 7411699198/7406928404

# ಅಜಾತ ಶತ್ರು

ಪ್ರದೀಪಕುಮಾರ
ಸಂಪಾದಕರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ




Volume:01 Issue: 85 Pages:04 Price:02 WEDNESDAY SEPTEMBER 09 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ



ಶತ್ರುಗಳಿರಬೇಕು ನಾವು ಬೆಟ್ಟವನ್ನು ಅಲ್ಲಾಡಿಸಲು,,
ಹುಟ್ಟು ಇರಬೇಕು ಬಾಳ ದೋಣಿಯಲ್ಲಿ ಏರಿಳಿತಗಳನ್ನು ತೊಡೆದು ಹಾಕಲು.

ವಾಣಿ ಭಂಡಾರಿ.

# ತಮಿಳುನಾಡಿಗೆ ನೀರು ಹರಿಸುವ ಅಸಂಬದ್ಧ ಆದೇಶ ವಿರುದ್ಧ ಸುಪ್ರೀಂ ಮೊರೆ : ಸಚಿವ ಚಲುವರಾಯಸ್ವಾಮಿ

ಬೆಂಗಳೂರು: ತಮಿಳುನಾಡಿಗೆ ನಿತ್ಯ 6 ಸಾವಿರ ಕ್ಯೂಸೆಕ್ಸ್ ಕಾವೇರಿ ನೀರು ಹರಿಸುವಂತೆ ಸಿಡಬ್ಲ್ಯುಆರ್ ಸಿ ನೀಡಿರುವ ಆದೇಶ ಅಸಂಬದ್ಧವಾಗಿದ್ದು, ಅತ್ಯಂತ ನೋವು ಹಾಗೂ ಬೇಸರ ತಂದಿದೆ ಎಂದು ಜಲಸಂಪನ್ಮೂಲ ಸಚಿವ ಎನ್. ಚಲುವರಾಯಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, "ಸಿಡಬ್ಲ್ಯುಆರ್ ಸಿ ಸಭೆಯಲ್ಲಿ ನಮ್ಮ ರಾಜ್ಯದ ಅಧಿಕಾರಿಗಳು ವಾಸ್ತವ ಸ್ಥಿತಿಯ ಬಗ್ಗೆ ಪ್ರಬಲವಾಗಿ ವಾದ ಮಂಡಿಸಿದ್ದಾರೆ. ತಮಿಳುನಾಡು 17 ಸಾವಿರ ಕ್ಯೂಸೆಕ್ಸ್ ನೀರಿಗೆ ಬೇಡಿಕೆ ಇಟ್ಟಿತ್ತು. ಆದರೆ ಕಳೆದ ಒಂದು ವಾರದಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಿನ ಒಳಹರಿವು ಗಣನೀಯವಾಗಿ ಕಡಿಮೆಯಾಗಿದೆ. ಇಂತಹ ಸಂಕಷ್ಟದ ಸ್ಥಿತಿಯಲ್ಲಿ 6 ಸಾವಿರ ಕ್ಯೂಸೆಕ್ಸ್ ನೀರು ಹರಿಸುವುದೂ ನಮಗೆ ಅಸಾಧ್ಯ. ನಾವು 'ಶೂನ್ಯ ನೀರು' ಬಿಡುವ ನಿಟ್ಟಿನಲ್ಲಿ ಸತತ ಪ್ರಯತ್ನ ನಡೆಸುತ್ತಿದ್ದೇವೆ" ಎಂದರು. ದೆಹಲಿಯಲ್ಲಿ ಕುಳಿತು ಆದೇಶ ನೀಡುವ ಪ್ರಾಧಿಕಾರಗಳ ಕಾರ್ಯವೈಖರಿಯನ್ನು ತರಾಟೆಗೆ ತೆಗೆದುಕೊಂಡ ಸಚಿವರು, "ದೆಹಲಿಯಲ್ಲಿ ಕುಳಿತು ಆಡಳಿತ ನಡೆಸುವ ಕಾನ್ಸಿಟ್ಯೂಷನ್ ಹಾಗೂ ಅಡ್ಮಿನಿಸ್ಟ್ರೇಶನ್ ಬೆಂಚ್‌ಗಳಿಗೆ ನೆಲಮಟ್ಟದ ವಾಸ್ತವ ಸ್ಥಿತಿ ಅರ್ಥವಾಗುತ್ತಿಲ್ಲ. ಈ ಹಿಂದೆಯೂ ವಾಸ್ತವ ಅರಿಯದೆ ಇದೇ ರೀತಿಯ ಆದೇಶಗಳನ್ನು ನೀಡಿರುವ ನಿದರ್ಶನಗಳಿವೆ.



ಸಿಡಬ್ಲ್ಯುಎಂಎ ಸಭೆಲ್ಲಿಯೂ ನಮಗೆ ಹೆಚ್ಚಿನ ಸಮಾಧಾನ ಸಿಗುವುದು ಅನುಮಾನ. ಹೀಗಾಗಿ ಸಿಡಬ್ಲ್ಯೂಎಂಎ ಸಭೆಯ ಬಳಿಕ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ನಾಳೆಯೇ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆ," ಎಂದು ಮಾಹಿತಿ ನೀಡಿದರು. ರಾಜ್ಯದ ಜಲಾಶಯಗಳ ನೀರಿನ ಸಂಗ್ರಹದ ಕುರಿತು ವಿವರಿಸಿದ ಅವರು, "ಪ್ರಸ್ತುತ ಡ್ಯಾಂಗಳಲ್ಲಿರುವ ನೀರಿನ ಪೈಕಿ ಶೇ. 50 ರಷ್ಟನ್ನು ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ಮೀಸಲಿಡಲಾಗಿದೆ. ಭದ್ರಾ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ರೈತರ ಬೆಳೆಗಳಿಗೆ ಅಗತ್ಯಕ್ಕೆ ತಕ್ಕಂತೆ ನೀರು ಒದಗಿಸಲಾಗಿದೆ. ಚಿತ್ರದುರ್ಗ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ನದಿಯ ಮೂಲಕ ನೀರು ಹರಿಸಲಾಗಿದೆ. ಎಲ್ಲೆಡೆ ಕೆರೆ-ಕುಂಟೆಗಳನ್ನು ತುಂಬಿಸಿ ಜನ-ಜಾನುವಾರುಗಳಿಗೆ ಸಮಸ್ಯೆಯಾಗದಂತೆ ಡ್ಯಾಂಗಳಿಂದ ನಿಯಂತ್ರಿತವಾಗಿ ನೀರು ನಿರ್ವಹಣೆ ಮಾಡಲಾಗುತ್ತಿದೆ," ಎಂದರು. ಇದೇ ವೇಳೆ ವಿರೋಧ ಪಕ್ಷದ ನಾಯಕರ ಪಾದಯಾತ್ರೆಯ ಕುರಿತು ವ್ಯಂಗ್ಯವಾಡಿದ ಸಚಿವ ಚಲುವರಾಯಸ್ವಾಮಿ, "ಬಿಜೆಪಿಯವರು ಯಾರ ಹಠಕ್ಕೆ ಬಿದ್ದು ಪಾದಯಾತ್ರೆ ನಡೆಸುತ್ತಿದ್ದಾರೆ ಎಂಬುದು ಇಡೀ ರಾಜ್ಯದ ಜನತೆಗೆ ಗೊತ್ತಿದೆ. ಈಗಾಗಲೇ ಆರ್. ಅಶೋಕ್ ಅವರಿಗೆ ಕಾಲು ನೋವು ಕಾಣಿಸಿಕೊಂಡಿದೆ. ಅಲ್ಲಿರುವ ನಾಯಕರೂ ನಮ್ಮ ಸ್ನೇಹಿತರೇ ಆಗಿದ್ದು, ಪಾದಯಾತ್ರೆ ಮಾಡುವವರ ಆರೋಗ್ಯ ಕೆಡದಿರಲಿ. ಪಾದಯಾತ್ರೆ ಮುಗಿದ ಮೇಲೂ ಅವರ ಆರೋಗ್ಯ ಸ್ಥಿರವಾಗಿರಲಿ ಎಂದು ಆಶಿಸುತ್ತೇನೆ," ಎಂದು ಟಾಂಗ್ ನೀಡಿದರು.

" ಸಿಡಬ್ಲ್ಯುಎಂಎ ಸಭೆಲ್ಲಿಯೂ ನಮಗೆ ಹೆಚ್ಚಿನ ಸಮಾಧಾನ ಸಿಗುವುದು ಅನುಮಾನ. ಹೀಗಾಗಿ ಸಿಡಬ್ಲ್ಯೂಎಂಎ ಸಭೆಯ ಬಳಿಕ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ, ನಾಳೆಯೇ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆ," ಎಂದು ಮಾಹಿತಿ ನೀಡಿದರು. ರಾಜ್ಯದ ಜಲಾಶಯಗಳ ನೀರಿನ ಸಂಗ್ರಹದ ಕುರಿತು ವಿವರಿಸಿದ ಅವರು, "ಪ್ರಸ್ತುತ ಡ್ಯಾಂಗಳಲ್ಲಿರುವ ನೀರಿನ ಪೈಕಿ ಶೇ. 50 ರಷ್ಟನ್ನು ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ಮೀಸಲಿಡಲಾಗಿದೆ. ಭದ್ರಾ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ರೈತರ ಬೆಳೆಗಳಿಗೆ ಅಗತ್ಯಕ್ಕೆ ತಕ್ಕಂತೆ ನೀರು ಒದಗಿಸಲಾಗಿದೆ.

## ಕಲ್ಯಾಣ ಕರ್ನಾಟಕ ಉತ್ಸವ ಹಾಗೂ ವಿಶ್ವಕರ್ಮ ಜಯಂತಿ: ಪೂರ್ವಭಾವಿ ಸಭೆ

ಅ.ಶ. ಸುದ್ದಿ ಕನಕಗಿರಿ

ಕನಕಗಿರಿ: ಕಲ್ಯಾಣ ಕರ್ನಾಟಕ ಉತ್ಸವ ಹಾಗೂ ಶ್ರೀ ವಿಶ್ವಕರ್ಮ ಜಯಂತಿ ಅಂಗವಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಕುರಿತು ಇಂದು ಕನಕಗಿರಿ ತಾಲೂಕು ಕಚೇರಿಯಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ಪೂರ್ವಭಾವಿ ಸಭೆ ನಡೆಯಿತು. ಸಭೆಯಲ್ಲಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಾಗೂ ಯಶಸ್ವಿಯಾಗಿ ಆಚರಿಸುವ ಕುರಿತು ಅಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ಸಿಬ್ಬಂದಿಯೊಂದಿಗೆ ಚರ್ಚಿಸಲಾಯಿತು.



ಕಾರ್ಯಕ್ರಮದ ಸಿದ್ಧತೆ, ಅಗತ್ಯ ವ್ಯವಸ್ಥೆಗಳು ಹಾಗೂ ಜವಾಬ್ದಾರಿಗಳ ಕುರಿತು ತಹಶೀಲ್ದಾರ್ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ, ಊರಿನ ಮುಖಂಡರು, ವಿಶ್ವಕರ್ಮ ಸಮಾಜದವರು,ಉಪಸ್ಥಿತರಿದ್ದರು.

## ಬೆಟಗೇರಾ, ತಳಕಲ್, ಅಳವಂಡಿ ಉಪಕೇಂದ್ರಗಳ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಸೆ. 10ಕ್ಕೆ



ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: ಕೊಪ್ಪಳ ಜೆಸ್ಕಾಂ ಕಾರ್ಯ ಮತ್ತು ಪಾಲನಾ ಉಪ ವಿಭಾಗ ವ್ಯಾಪ್ತಿಗೆ ಬರುವ ಬೆಟಗೇರಾ, ತಳಕಲ್, ಅಳವಂಡಿ ಉಪಕೇಂದ್ರಗಳಲ್ಲಿ ದ್ವಿತಿಯ ತ್ರೈಮಾಸಿಕ ತುರ್ತು ನಿರ್ವಹಣೆ ಕೆಲಸದ ನಿಮಿತ್ತ ಸೆಪ್ಟೆಂಬರ್ 10 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

110ಕೆವಿ ಬೆಟಗೇರಾ ಉಪಕೇಂದ್ರದ ವ್ಯಾಪ್ತಿಗೆ ಬರುವ ಎಫ್-1 ಮೋರನಾಳ ಐ.ಪಿ, ಎಫ್-2 ಬೋಚನಹಳ್ಳಿ ಐ.ಪಿ, ಎಫ್-3 ಹನಕುಂಟಿ ಐ.ಪಿ, ಎಫ್-5 ತಿಗರಿ ಐ.ಪಿ. ಎಫ್-7 ನೀರಲಗಿ ಐ.ಪಿ, ಎಫ್-8 ಕಾತರಕಿ ಐ.ಪಿ, ಎಫ್-10 ಮತ್ತೂರ ಐ.ಪಿ, ಎಫ್-11 ಬಿಸರಳ್ಳಿ ಐ.ಪಿ, ಎಫ್-4 ಬೆಟಗೇರಿ ನಗರ ಎನ್.ಜೆ.ವೈ, ಎಫ್-6 ಬೆಟಗೇರಿ ಎನ್.ಜೆ.ವೈ, ಎಫ್-9 ಡಂಬ್ರಳ್ಳಿ ಎನ್.ಜೆ.ವೈ ಹಾಗೂ 110 ಕೆವಿ ತಳಕಲ್ ಉಪಕೇಂದ್ರಕ್ಕೆ ಒಳಪಡುವ ಎಫ್-4 ಹಲಗೇರಿ ಎನ್.ಜೆ.ವೈ, ಎಫ್-11 ವದಗನಾಳ ಐ.ಪಿ, ಎಫ್-12 ದದೆಗಲ್ ಐ.ಪಿ. ಮತ್ತು 33ಕೆವಿ ಅಳವಂಡಿ ಉಪಕೇಂದ್ರದ ವ್ಯಾಪ್ತಿಯ ಎಫ್-1 ಭೈರಾಪೂರ ಐ.ಪಿ, ಎಫ್-3 ಹಲವಾಗಲಿ ಐ.ಪಿ, ಎಫ್-4 ಬೆಳಗಟ್ಟಿ ಐ.ಪಿ, ಎಫ್-5 ಕವಲೂರ ಐ.ಪಿ, ಎಫ್-2 ಅಳವಂಡಿ ಎನ್.ಜೆ.ವೈ, ಎಫ್-6 ಹೈದರನಗರ ಎನ್.ಜೆ.ವೈ. ಪ್ರದೇಶಗಳಲ್ಲಿ ಸೆ. 10ರ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4 ವರೆಗೆ ವಿದ್ಯುತ್ ವ್ಯತ್ಯಯ ಆಗಲಿದ್ದು, ಸಾರ್ವಜನಿಕರು ಸಹಕರಿಸಬೇಕು. ಕಾಮಗಾರಿ ಬೇಗನೆ ಮುಕ್ತಾಯಗೊಂಡಲ್ಲಿ, ಯಾವುದೇ ಸಮಯದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು.

ಆದ್ದರಿಂದ ಸಾರ್ವಜನಿಕರು ಯಾವುದೇ ತರಹದ ವಿದ್ಯುತ್ ದುರಸ್ಥಿ ಕೆಲಸ-ಕಾರ್ಯಗಳನ್ನು ಮಾಡಬಾರದು ಒಂದು ವೇಳೆ ವಿದ್ಯುತ್ ಅಫಘಾತ ಸಂಬವಿಸಿದ್ದಲ್ಲಿ ಕಂಪನಿಯು ಜವಬ್ದಾರರಾಗಿರುವುದಿಲ್ಲ ಎಂದು ಕೊಪ್ಪಳ ಜೆಸ್ಕಾಂ ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾಯ್ದೆ ನಿಯಮ ತಿಳಿದುಕೊಳ್ಳಲು ಹಿರಿಯರಿಗೆ ಸಲಹೆ

ಅ.ಶ. ಸುದ್ದಿ ವಿಜಯಪುರ

ವಿಜಯಪುರ: ಹಿರಿಯ ನಾಗರಿಕರ ರಕ್ಷಣೆಗಾಗಿ ಜಾರಿಗೊಂಡಿರುವ 2007ರ ಕಾಯ್ದೆ ಹಾಗೂ ನಿಯಮಗಳ ಬಗ್ಗೆ ಹಿರಿಯ ನಾಗರಿಕರು ಅರಿವು ಹೊಂದಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅರವಿಂದ ಹಾಗರಗಿ ಹೇಳಿದರು.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಆಯೋಜಿಸಿದ್ದ



ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಿರಿಯ ನಾಗರಿಕರಿಗೆ ದೊರೆಯುವ ಕಾನೂನು ರಕ್ಷಣೆ, ಸರ್ಕಾರಿ ಸೌಲಭ್ಯಗಳು ಹಾಗೂ ಹಕ್ಕುಗಳ ಕುರಿತು ಅಧಿಕಾರಿಗಳು ಮಾಹಿತಿ ನೀಡಬೇಕು ಎಂದರು. ಸಂಪನ್ಮೂಲ ವ್ಯಕ್ತಿ ಬಾಬು ಅವತಾಡೆ ಅವರು ಆಸ್ತಿ ವರ್ಗಾವಣೆ ಹಾಗೂ ನಿರ್ವಹಣಾ ವೆಚ್ಚಗಳ ಕುರಿತು, ನ್ಯಾಯವಾದಿ ಆರ್.ಕೆ. ಪೂಜಾರಿ ಅವರು ಸೈಬರ್ ಹಾಗೂ ಡಿಜಿಟಲ್ ವಂಚನೆ ಮತ್ತು ಕೇಂದ್ರ-ರಾಜ್ಯ ಸರ್ಕಾರದ ಯೋಜನೆಗಳ ಕುರಿತು ಮಾಹಿತಿ ನೀಡಿದರು.

ತಾಲೂಕು ಪಂಚಾಯಿತಿ ಇಒ ಗುರುಶಾಂತಪ್ಪ ಬೆಳ್ಳುಂಡಗಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. ಸಾಮಾಜಿಕ ಕಾರ್ಯಕರ್ತೆ ಗುಜ್ಜೂರ ಅವರನ್ನು ಸನ್ಮಾನಿಸಲಾಯಿತು.

## ಭವರೋಗ ಗುಣಪಡಿಸುವ ಶಕ್ತಿ ಭಜನೆಯಲ್ಲಿದೆ : ಅಳವಂಡಿ ಮರುಳಾರಾಧ್ಯ ಸ್ವಾಮೀಜಿ,,



ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: ಶ್ರಾವಣ ಮಾಸದಲ್ಲಿ ಪುರಾಣ ಪ್ರವಚನ ಹಾಗೂ ಭಕ್ತಿ ಭಜನೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಮನಸ್ಸಿಗೆ ಶಾಂತಿ, ನೆಮ್ಮದಿ ದೊರೆಯುವುದರ ಜೊತೆಗೆ ಭವರೋಗವೂ ದೂರವಾಗುತ್ತದೆ ಎಂದು ಅಳವಂಡಿ ಶ್ರೀ ಸಿದ್ದೇಶ್ವರ ಮಠದ ಮರುಳಾರಾಧ್ಯ ಸ್ವಾಮೀಜಿ ಹೇಳಿದರು.

ಕೊಪ್ಪಳ ತಾಲ್ಲೂಕಿನ ಅಳವಂಡಿ ಗ್ರಾಮದ ಶ್ರೀ ಸಿದ್ದೇಶ್ವರ ಮಠದಲ್ಲಿ ಶ್ರಾವಣ ಮಾಸದ ಅಂಗವಾಗಿ ಆಯೋಜಿಸಿದ್ದ ಭಜನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಜನೆ ಹಾಗೂ ಭಕ್ತಿಗೀತೆಗಳು ಮನುಷ್ಯನ ಮನಸ್ಸನ್ನು ನಿರ್ಮಲಗೊಳಿಸುವ ಶಕ್ತಿಯನ್ನು ಹೊಂದಿವೆ. ಭಕ್ತಿಭಾವದಿಂದ ಭಜನಾ ಸೇವೆಯಲ್ಲಿ ತೊಡಗಿಕೊಳ್ಳುವುದರಿಂದ ಜೀವನದಲ್ಲಿ ಸಾತ್ವಿಕತೆ, ಶಾಂತಿ ಮತ್ತು ನೆಮ್ಮದಿ ವೃದ್ಧಿಯಾಗುತ್ತದೆ ಎಂದರು.

ಭಜನಾ ಸೇವೆ ಸಲ್ಲಿಸಿದ ಕಲಾವಿದರಿಗೆ ಶುಭ ಹಾರೈಸಿದ ಸ್ವಾಮೀಜಿ, ಇಂತಹ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಗ್ರಾಮೀಣ ಭಾಗದಲ್ಲಿ ಭಕ್ತಿ ಮತ್ತು ಸೌಹಾರ್ದತೆಯನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಉಪನಾಯಕನಹಳ್ಳಿ ಗ್ರಾಮದ ಶ್ರೀ ಮೈಲಾರಲಿಂಗೇಶ್ವರ ಭಜನಾ ತಂಡದಿಂದ ಭಜನಾ ಸೇವೆ ನೆರವೇರಿಸಲಾಯಿತು. ಕಾರ್ಯಕ್ರಮದಲ್ಲಿ ಅಳವಂಡಿ ಗ್ರಾಮಸ್ಥರು, ಶ್ರೀಮಠದ ಭಕ್ತರು ಹಾಗೂ ಸಂಗೀತ ಪ್ರೇಮಿಗಳು ಉಪಸ್ಥಿತರಿದ್ದರು.

# ಗೌರಿ-ಗಣೇಶ ಹಬ್ಬ: ಶಾಂತಿ ಸುವ್ಯವಸ್ಥೆಗೆ ಅಧಿಕಾರಿಗಳ ಸಭೆ

ಅ.ಶ. ಸುದ್ದಿ ಕನಕಗಿರಿ

ಕನಕಗಿರಿ: ಗೌರಿ-ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಕುರಿತು ಪೊಲೀಸ್ ಠಾಣೆಯಲ್ಲಿ ಪೂರ್ವಭಾವಿ ಶಾಂತಿ ಸಭೆ ನಡೆಯಿತು. ತಹಶೀಲ್ದಾರ್, ಪೊಲೀಸ್ ಇಲಾಖೆ, ಪಟ್ಟಣ ಪಂಚಾಯಿತಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆ, ವಿಸರ್ಜನೆ ಹಾಗೂ ಹಬ್ಬದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಚರ್ಚಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಅಯ್ಯನಗೌಡ, ಗಣೇಶ ಮೂರ್ತಿ ವಿಸರ್ಜನೆ ಸಂದರ್ಭದಲ್ಲಿ ಜೆಸಿಬಿ ಮೂಲಕ ಅಗತ್ಯ ವ್ಯವಸ್ಥೆ ಕಲ್ಪಿಸಬೇಕು. ಎಲ್ಲ ಗಣೇಶ ಮೂರ್ತಿಗಳ ವಿಸರ್ಜನೆಗೆ ಒಂದೇ



ಸ್ಥಳದಲ್ಲಿ ಸೂಕ್ತ ವ್ಯವಸ್ಥೆ ಮಾಡಬೇಕು. ವಿಸರ್ಜನಾ ಸ್ಥಳದಲ್ಲಿ ಸ್ವಚ್ಛತೆ ಕಾಪಾಡಬೇಕು ಹಾಗು ಪೊಲೀಸ್ ಇಲಾಖೆ ಇಂದ ಬಂದೋಬಸ್ತ್ ಮಾಡಬೇಕು ಎಂದು ಮನವಿ ಮಾಡಿದರು. ಜೊತೆಗೆ ಹಾಳಾಗಿರುವ ರಸ್ತೆಗಳನ್ನು ಹಬ್ಬದ ಹಿನ್ನೆಲೆಯಲ್ಲಿ ಕನಿಷ್ಠ ಮಟ್ಟದಲ್ಲಾದರೂ ಸುಧಾರಿಸಬೇಕು ಎಂದು ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ತಿಳಿಸಿದರು.

ಮಾಜಿ ಪಟ್ಟಣ ಪಂಚಾಯಿತಿ ಸದಸ್ಯ ಸುಭಾಷ್ ಮಾತನಾಡಿ, ಗೌರಿ-ಗಣೇಶ ಹಬ್ಬದ ಸಂದರ್ಭದಲ್ಲಿ ಕೆಲವು ದಿನಗಳ ಕಾಲ ಸ್ಥಳೀಯ ಮದ್ಯದ ಅಂಗಡಿಗಳನ್ನು ಬಂದ್ ಮಾಡುವಂತೆ ಮನವಿ ಮಾಡಿದರು. ಇದರಿಂದ ಹಬ್ಬದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು. ಪಟ್ಟಣದಲ್ಲಿ ಯಾವುದೇ ಅನಾಹುತ ಸಂಭವಿಸುವ ಮುನ್ನವೇ ಅಗ್ನಿಶಾಮಕ ವಾಹನದ ವ್ಯವಸ್ಥೆ ಕಲ್ಪಿಸಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು. ಅಲ್ಲದೆ ಜಗಳ ಹಾಗೂ ಅಹಿತಕರ ಘಟನೆಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಬೇಕು ಎಂಬ ಸಲಹೆಯೂ ವ್ಯಕ್ತವಾಯಿತು.

ನಂತರ ಮಾತನಾಡಿದ ಪಟ್ಟಣ ಪೊಲೀಸ್ ಇನ್ಸ್‌ಪೆಕ್ಟರ್ ವೀರಣ್ಣ ಎಂ ಹಳ್ಳಿ, ಗಣೇಶೋತ್ಸವಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ಕೆಲವು ನಿಯಮ ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಎಲ್ಲರೂ ಅವುಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ತಿಳಿಸಿದರು. ಗಣೇಶ ಹಬ್ಬವನ್ನು ಶಾಂತಿ, ಸೌಹಾರ್ದತೆ ಹಾಗೂ ಭಕ್ತಿಭಾವದಿಂದ ಆಚರಿಸೋಣ ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು. ಸಭೆಯಲ್ಲಿ ತಾಲೂಕು ಆಡಳಿತಾಧಿಕಾರಿ ಚಂದ್ರಶೇಖರ ಗಾಳಿ, ಪಟ್ಟಣ ಪಂಚಾಯಿತಿ ಪ್ರಭಾರಿ ಮುಖ್ಯಾಧಿಕಾರಿ ಹಾಗೂ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಕೆ. ರಾಜಶೇಖರ್, ಜೆಸ್ಕಾಂ ಇಲಾಖೆ ಅಧಿಕಾರಿ ಆನಂದ, ಪಿಎಸ್‌ಐ ಉಮೇಶ್, ಅಗ್ನಿಶಾಮಕ ದಳದ ಅಧಿಕಾರಿಗಳು ಮತ್ತು ಸಿಬ್ಬಂದಿ, ಊರಿನ ಮುಖಂಡರಾದ ಸುಭಾಷ್, ಕನಕಪ್ಪ, ಹನುಮಂತ ರೆಡ್ಡಿ, ಪೃಥ್ವಿಕುಮಾರ್, ಕಂಠೀರಂಗ ನಾಯಕ, ಹನುಮೇಶ್ ವಾಲೇಕರ್, ಬಸವರಾಜ ಕಲ್ಲಿಕೆರೆ, ಹನುಮೇಶ್ ಗಂಗಾಮಾತ್, ಕಿರಣ್ ಕುಮಾರ್ ಸೇರಿದಂತೆ ಅನೇಕ ಯುವಕರು ಹಾಗೂ ಹಿರಿಯ ಮುಖಂಡರು ಉಪಸ್ಥಿತರಿದ್ದರು.

# ಭಟಪನಹಳ್ಳಿಯಲ್ಲಿ ಬಿನ್ನಾಳ-ಕುಕನೂರು ಗ್ರಾಮೀಣ ವಲಯ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ

**ಅ.ಶ. ಸುದ್ದಿ ಕುಕನೂರು**

**ಕುಕನೂರು: ವಿದ್ಯಾರ್ಥಿಗಳು ಆರೋಗ್ಯವಂತ ಮತ್ತು ಸಧೃಡ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಕ್ರೀಡೆಗಳು ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅವರ ಭವಿಷ್ಯದ ಸಾಧನೆಗೆ ಉತ್ತಮ ವೇದಿಕೆಯನ್ನು ಒದಗಿಸುತ್ತವೆ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಲಿ ಹೇಳಿದರು.**

ಅವರು ಕುಕನೂರು ತಾಲೂಕಿನ ಭಟಪನಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಬಿನ್ನಾಳ ಹಾಗೂ ಕುಕನೂರು ಗ್ರಾಮೀಣ ವಲಯ ಮಟ್ಟದ ಹಿರಿಯ ಪ್ರಾಥ-ಮಿಕ ಶಾಲೆಗಳ ಕ್ರೀಡಾಕೂಟಕ್ಕೆ ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿ-ಕೆಗಳಲ್ಲಿಯೂ ಆಸಕ್ತಿಯಿಂದ ಪಾಲ್ಗೊಳ್ಳಬೇಕು. ಹಿರಿಯ ಕ್ರೀಡಾಪಟುಗಳ ಸಾಧನೆಗಳಿಂದ ಪ್ರೇರಣೆ ಪಡೆದು ತಾಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸುವ ಮೂಲಕ ಉತ್ತಮ ಸಾಧನೆ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಎಚ್.ಡಿ. ಪಾಟೀಲರ ವ್ಯಕ್ತಿತ್ವಕ್ಕೆ ಮೆಚ್ಚುಗೆ ಭಟಪನಹಳ್ಳಿ ಗ್ರಾಮದ ಡಾ. ಎಚ್.ಡಿ. ಪಾಟೀಲರು ಕರ್ನಾಟಕ ಲೋಕಸೇವಾ ಆಯೋಗದಲ್ಲಿದ್ದ ಸಂದರ್ಭದಲ್ಲಿ ಅನೇಕ ಬಡ ಕುಟುಂಬಗಳ



ಯುವಕರಿಗೆ ಉದ್ಯೋಗಾವಕಾಶ ದೊರಕುವಂತೆ ಸಹಕಾರ ನೀಡಿದವರಾಗಿದ್ದಾರೆ ಎಂದು ಚಂದ್ರಶೇಖರ ನುಗ್ಲಿ ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರತಿಯೊಬ್ಬರೂ ಕೇವಲ ಉದ್ಯೋಗಿಗಳಾಗುವುದಕ್ಕೆ ಸೀಮಿತರಾಗದೆ, ಇತರರಿಗೆ ಉದ್ಯೋಗ ನೀಡುವ ಉದ್ಯೋಗದಾತರಾಗಿ ಬೆಳೆಯಬೇಕು ಎಂಬ ಕನಸು ಹೊಂದಿರುವ ಡಾ. ಎಚ್.ಡಿ. ಪಾಟೀಲರು ಸಾಮಾಜಿಕ ಚಿಂತನೆಯ ವ್ಯಕ್ತಿತ್ವ ಹೊಂದಿದ್ದಾರೆ. ಸಮಾಜದಲ್ಲಿ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸುವವರಿಗೆ ಸದಾ ನೆರವಾಗುವ ಗುಣವನ್ನು ಹೊಂದಿದ್ದಾರೆ ಎಂದರು.

ಮನುಷ್ಯ ಬದುಕಿರುವಾಗ ಮಾತ್ರ ಬದುಕುವುದು ಮುಖ್ಯವಲ್ಲ; ತನ್ನ ಸಾಧನೆಗಳ ಮೂಲಕ ಮರಣಾನಂತರವೂ ಸಮಾಜದಲ್ಲಿ ನೆನಪಾಗಿ ಉಳಿಯುವಂತಹ ಕಾರ್ಯಗಳನ್ನು ಮಾಡಬೇಕು" ಎಂಬ ಮನೋಭಾವವನ್ನು ಪಾಟೀಲರು ಹೊಂದಿದ್ದಾರೆ ಎಂದು ಹೇಳಿದರು. 'ಹಿತ್ತಲ ಗಿಡ ಮದ್ದಲ್ಲ' ಎಂಬಂತೆ ತಮ್ಮ ಗ್ರಾಮದ ಇಂತಹ ಮಹತ್ವದ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳುವುದು ಗ್ರಾಮಸ್ಥರ ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಶರಣಬಸನಗೌಡ ಪಾಟೀಲ ಮಾತನಾಡಿ, ಕ್ರೀಡಾಪಟುಗಳು ಸೋಲು-ಗೆಲುವನ್ನು ಸಮಾನ ಮನೋಭಾವದಿಂದ ಸ್ವೀಕರಿಸಬೇಕು.

ಸೋತವರು ನಿರಾಶರಾಗದೆ ಮುಂದಿನ ಸಾಧನೆಗೆ ಸಿದ್ಧರಾಗಬೇಕು ಹಾಗೂ ಗೆದ್ದವರಿಗೆ ಅಭಿನಂದನೆ ಸಲ್ಲಿಸುವ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು. ತಾಲೂಕು ಅಧ್ಯಕ್ಷ ಮಹೇಶ ಸಬರದ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.



ಗ್ರಾಮದ ಮುಖಂಡ ಡಾ. ಎಚ್.ಡಿ. ಪಾಟೀಲ ಮಾತನಾಡಿ, ಗ್ರಾಮದ ಎಸ್‌ಡಿಎಂಸಿ ಅಧ್ಯಕ್ಷರು, ಸರ್ವ ಸದಸ್ಯರು ಹಾಗೂ ಗ್ರಾಮಸ್ಥರ ಸಹಕಾರದಿಂದ ಕ್ರೀಡಾಕೂಟ ಯಶಸ್ವಿಯಾಗಿ ನಡೆಯುತ್ತಿದೆ. ಗ್ರಾಮದಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ ಯುವಕರು ಹಾಗೂ ಹಿರಿಯರು ಒಗ್ಗಟ್ಟಿನಿಂದ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸುವುದು ನಮ್ಮ ಗ್ರಾಮದ ವಿಶೇಷತೆ ಮತ್ತು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಪ್ರತಿಯೊಬ್ಬ ಶಿಷ್ಯನ ಯಶಸ್ಸಿನ ಹಿಂದೆ ಗುರುವಿನ ಮಾರ್ಗದರ್ಶನ ಇರಬೇಕು. ವಿದ್ಯಾರ್ಥಿಗಳು ಸದಾ ಗುರುಗಳ ಮಾರ್ಗದರ್ಶನ ಪಡೆದು ಶ್ರಮ ಮತ್ತು ಶ್ರದ್ಧೆಯಿಂದ ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕು ಎಂದು ಕರೆ ನೀಡಿದರು. ಶಿಕ್ಷಣ ವ್ಯವಸ್ಥೆ ಕುರಿತು ಮಹತ್ವದ ಚರ್ಚೆ ಕಾರ್ಯಕ್ರಮದ ಬಳಿಕ ಡಾ. ಎಚ್.ಡಿ. ಪಾಟೀಲರ ನಿವಾಸದಲ್ಲಿ ಸರ್ಕಾರಿ ಶಾಲಾ ಮಕ್ಕಳ ಉತ್ತಮ ಶಿಕ್ಷಣ ಮತ್ತು ಬೋಧನೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಲಿ ಅವರೊಂದಿಗೆ ಚರ್ಚಿಸಲಾಯಿತು. ಶಾಲಾ ಮುಖ್ಯಶಿಕ್ಷಕರು ಹಾಗೂ ಸಹ ಶಿಕ್ಷಕರು ಬೋಧನೆಯಲ್ಲಿ ಹಿಂದುಳಿಯದಂತೆ ಅಗತ್ಯ ಕ್ರಮ ಕೈಗೊಳ್ಳುವುದು, ಶಿಕ್ಷಕರ ಮೇಲೆ ಸರ್ಕಾರದಿಂದ ವಿಧಿಸಲಾಗುತ್ತಿರುವ ವಿವಿಧ ಹೆಚ್ಚುವರಿ ಮತ್ತು ಹೊರೆ ಕೆಲಸಗಳಿಂದ ಮಕ್ಕಳ ಶಿಕ್ಷಣದ ಮೇಲೆ ಉಂಟಾಗುತ್ತಿರುವ ಪರಿಣಾಮ ಸೇರಿದಂತೆ ಹಲವು ವಿಷಯಗಳ ಕುರಿತು ಸಮಾಲೋಚನೆ ನಡೆಸಲಾಯಿತು.

ಮುಂದಿನ ದಿನಗಳಲ್ಲಿ ಶಿಕ್ಷಕರಿಗೆ ಅನಗತ್ಯ ಹೊರೆ ಕೆಲಸಗಳನ್ನು ಕಡಿಮೆಗೊಳಿಸಿ, ಮಕ್ಕಳ ವ್ಯಾಸಂಗ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವ ಕುರಿತು ಚರ್ಚೆ ನಡೆಸಲಾಯಿತು. ಬಳಿಕ ಶಿಕ್ಷಕರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ ಕುರಿ, ಮಾರುತೇಶ್ವರ ತಳವಾರ, ಬಸವರಾಜ ಬೆಲ್ಲದ್, ಫಕೀರಪ್ಪ ಪೊತುಂಡಿ, ಉಮೇಶ್ ಕಂಬಳಿ, ಚಂದ್ರು ರಾಜೂರ, ಮಹೇಶ ಸಬರದ, ಎಸ್.ಎಂ. ಹಿರೇಮಠ, ಗ್ರಾಮದ ಪ್ರಮುಖರಾದ ಕೆಂಚಪ್ಪ ನಡುವಲಮನಿ, ರಾಯಪ್ಪ ವಾಲಿಕಾರ, ಮಲ್ಲಪ್ಪ ಗುಡಿಹಿಂದಲ್, ಶರಣಪ್ಪ ಹಾದಿಮನಿ, ಹಂಚ್ಯಾಳಪ್ಪ ಕಲ್ಗುಡಿ, ಪರಸನ ಹೊಸ್ಮನಿ, ವೀರಯ್ಯ ಭದ್ರಪೂರ, ಮಹೇಶ ದೊಡ್ಡಮನಿ ಸೇರಿದಂತೆ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಶಿಕ್ಷಕರು, ಗ್ರಾಮದ ಹಿರಿಯರು, ಯುವಕರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ರಾಯಲ್ಟಿ ಅವಧಿ ಮುಗಿದರೂ ರಾಜಾರೋಷವಾಗಿ ಮರಳು ಸಾಗಾಟ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾರ್ವಜನಿಕರ ಆಕ್ರೋಶ

**ಅ.ಶ. ಸುದ್ದಿ ಕನಕಗಿರಿ**

**ಕನಕಗಿರಿ: ಕೊಪ್ಪಳ ಜಿಲ್ಲೆ ಕನಕಗಿರಿ ತಾಲೂಕು ಕಿನ ನವಲಿ ಗ್ರಾಮದಿಂದ ಹೊಸಪೇಟೆ ಕಡೆಗೆ ಮರಳನ್ನು ಸಾಗಿಸಲಾಗುತ್ತಿದ್ದು, ಮರಳು ಸಾಗಾಟಕ್ಕೆ ನೀಡಲಾಗಿದ್ದ ರಾಯಲ್ಟಿ ಅವಧಿ ಮುಗಿದಿದ್ದರೂ ಟಿಪ್ಪರ್‌ಗಳ ಮೂಲಕ ರಾಜಾರೋಷವಾಗಿ ಮರಳು ಸಾಗಿಸಲಾಗುತ್ತಿದೆ. ಬಾರಿ ವೇಗದಲ್ಲಿ ಸಂಚಾರಿಸುತ್ತಿರುವ ಮರಳು ದಂದ್ದೆ ಕೊರರ ವಾಹನಗಳು, ನೇಮ್ ಪ್ಲೇಟ್ ಇಲ್ಲದೆ..! ಹಗಲು ರಾತ್ರಿ ರಾಜಾರೋಷವಾಗಿ ಚಲಿಸುತ್ತಿರುವುದು, ಅಧಿಕಾರಿಗಳು ಸಂಪೂರ್ಣ ನಿರ್ಲಕ್ಷತೆ ತೋರಿರುವುದು ಸ್ಪಷ್ಟವಾಗಿ ಕಂಡುಬಂದಿದ್ದು,**






ರಾಯಲ್ಟಿ ಅವಧಿ ಮುಗಿದ ಬಳಿಕವೂ ಮರಳು ಸಾಗಾಟ ನಡೆಯುತ್ತಿದ್ದರೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದೆ ಕಣ್ಣುಮುಚ್ಚಿ ಕುಳಿತಿ-ದ್ದಾರೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಇದರಿಂದ ಅಕ್ರಮ ಮರಳು ಸಾಗಾಟಕ್ಕೆ ಅಧಿಕಾರಿಗಳ ನಿರ್ಲಕ್ಷ್ಯವೊ ಅಥ-ವಾ ಭಾಗಿಯಾಗಿರುವರೋ ಎಂಬ ಪ್ರಶ್ನೆ ಸಾರ್ವಜಣಕಾರಲ್ಲಿ ಮೂಡಿದೆ. ಇನ್ನೊಂದೆಡೆ, ಅಕ್ರಮವಾಗಿ ಮರಳು ಸಾಗಿಸುತ್ತಿರುವ ಟಿಪ್ಪರ್‌ಗಳು ಕನಕಗಿರಿ ಪೊಲೀಸ್ ಠಾಣೆಯ ಮುಂಭಾಗದಲ್ಲೇ ಸಂಚರಿಸುತ್ತಿದ್ದರೂ ಅವುಗಳನ್ನು ತಡೆದು ಪರಿಶೀಲನೆ ನಡೆಸದೇ ಮುಂದಕ್ಕೆ ಕಳುಹಿಸಲಾಗುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ. ಮರಳು ಸಾಗಾಟಕ್ಕೆ ಸಂಬಂಧಿಸಿದ ದಾಖಲೆಗಳು, ರಾಯಲ್ಟಿ ಅವಧಿ ಹಾಗೂ ಅನುಮತಿ ಪತ್ರಗಳನ್ನು ಅಧಿಕಾರಿಗಳು ಸಮರ್ಪಕವಾಗಿ ಪರಿಶೀಲಿಸುತ್ತಿದ್ದಾರೆಯೇ? ಈ ಕುರಿತು ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಸೂಕ್ತ ಪರಿಶೀಲನೆ ನಡೆಸಿ, ಅಕ್ರಮ ಮರಳು ಸಾಗಾಟ ಕಂಡುಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಅಕ್ರಮ ಮರಳು ಸಾಗಾಣಿಕೆಯಿಂದ ಅಧಿಕಾ-ರಿಗಳು ಯಾವಾಗ ಕಡಿವಾಣ ಹಾಕುತ್ತಾರೋ ಮತ್ತು ಬಾರಿ ವಾಹನಗಳದಿಂದ ಕಲುಷಿತ ದೂಳು ರಹಿತ ಸುಗಮ ರಸ್ತೆ ಸಂಚಾರ ಯಾವಾಗ ಎಂಬುದನ್ನು ಕಾದು ನೋಡಬೇಕಾಗಿದೆ.

## 'ವಚನಾಮೃತ'

ದಿನ ಕಳೆದಂತೆ ಅರ್ಥ
ಕಳೆದುಕೊಳ್ಳುತ್ತಿರುವ ವಾಟ್ಸಪ್
ಯ್ಯೂನಿವರ್ಸಿಟಿಯಲ್ಲಿ ಅನರ್ಥಕಾರಿ
ಸ್ನೇಹಿತರನ್ನು ಇರಿಸಿಕೊಳ್ಳುವುದು
ಒಂದೇ ಇರುಳ ಕಂಡ ಬಾವಿಯಲ್ಲಿ
ಹಗಲು ಬೀಳುವುದು ಒಂದೆ.



ವಾಣಿ ಭಂಡಾರಿ.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಇಂಡಿ ತಾಲೂಕು ಬರಗಾಲ ಪ್ರದೇಶವೆಂದು ಘೋಷಿಸಲು ಆಗ್ರಹಿಸಿ ರೈತ ಸಂಘದಿಂದ ಬೃಹತ್ ಪ್ರತಿಭಟನೆ

**ಅ.ಶ. ಸುದ್ದಿ ಇಂಡಿ**

**ಇಂಡಿ: ಕರ್ನಾಟಕ ರೈತ ಸಂಘ ಮತ್ತು ಹಸಿರು ಸೇನೆಯ ವತಿಯಿಂದ ಇಂಡಿ ತಾಲೂಕು ಬರಗಾಲ ಪ್ರದೇಶವೆಂದು ಸಾರಬೇಕೆಂದು ಆಗ್ರಹಿಸಿ ಇಂದು ನಗರದಲ್ಲಿ ಕರ್ನಾಟಕ ರೈತ ಸಂಘದ ಅಡಿಯಲ್ಲಿ ಬೃಹತ್ ಪ್ರತಿಭಟನೆ ನಡೆಯಿತು. ಪ್ರತಿಭಟನೆಗೆ ಬಿಜೆಪಿ, ಜೆಡಿ ಎಸ್, ಬಸವ ಸಮಿತಿ, ಕೆ ಎಸ್ ಆರ್ ಪಕ್ಷ ತಮ್ಮ ಬೆಂಬಲ ಸೂಚಿಸಿದವು.**

ರೈತ ಸಂಘದ ಜಿಲ್ಲಾ ಅಧ್ಯಕ್ಷ ಎಸ್.ಬಿ.ಕಂಬೋಗಿ , ಮಾಜಿ ಶಾಸಕ ರವಿಕಾಂತ ಪಾಟೀಲ, ಪ್ರಾಂತ ಸಮಿತಿಯ ಭೀಮರಾಯ ಪೂಜಾರಿ, ಬಿಜೆಪಿ ತಾಲೂಕಾ ಅಧ್ಯಕ್ಷ ಹಣಮಂತರಾಯಗೌಡ ಪಾಟೀಲ, ಜೆಡಿ ತಾಲೂಕಾ ಅಧ್ಯಕ್ಷ ಬಿ.ಡಿ.ಪಾಟೀಲ ಶಂಕರಗೌಡ ಪಾಟೀಲ, ಬಾಳು ಮುಳಜಿ, ಮರೆಪ್ಪ ಗಿರಣಿವಡ್ಡರ ಮಾತನಾಡಿ ಇಂಡಿ ತಾಲೂಕು ಬರಗಾಲ ಪ್ರದೇಶವೆಂದು ಸಾರಬೇಕು. ಮಳೆಯಿಲ್ಲದೆ ಬೇಳೆ ಸರಿಯಾಗಿ ಬೆಳೆದಿಲ್ಲ. ಮಳೆ




ಸರಿಯಾಗಿ ಆಗದ ಕಾರಣ ರೈತರು ಅತೀವ ತೊಂದರೆ ಅನುಭವಿಸುತ್ತಿದ್ದಾರೆ ಎಂದರು. ಇಂಡಿ ತಾಲೂಕನ್ನು ಬರ ಪೀಡಿತವೆಂದು ಘೋಷಿಸಬೇಕು, ಬರದಿಂದ ಹಾನಿಗೊಳಗಾದ ರೈತರಿಗೆ ಸೂಕ್ತ ಪರಿಹಾರ ನೀಡಬೇಕು, ಬೆಳೆ ಸಮೀಕ್ಷೆ ತ್ವರಿತವಾಗಿ ಮತ್ತು ಪಾರದರ್ಶಕವಾಗಿ ನಡೆಯಬೇಕು.

ರೈತರಿಗೆ ಬೆಳೆ ವಿಮೆ ಹಾಗೂ ಸರಕಾರದ ಪರಿಹಾರವನ್ನು ಶೀಘ್ರ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆ ಪ್ರವಾಸಿ ಮಂದಿರದಿಂದ ನಗರದ ಪ್ರಮುಖ ಬೀದಿಗಳಲ್ಲಿ ಹಾಯ್ದು ಆಡಳಿತಸೌಧ ತಲುಪಿತು. ಪ್ರತಿಭಟನೆಯಲ್ಲಿ ಶ್ರೀಕಾಂತ ಪಾಟೀಲ,ಶಂಕರಗೌಡ ಬಿರಾದಾರ, ಅನೀಲಗೌಡ ಬಿರಾದಾರ, ಮುನ್ನು ನಾಯ್ಕ, ಲಕ್ಷ ?ಮಣ ಬಡಿಗೇರ, ಗುರುನಾಥ ಬಗಲಿ, ಹುಲಪ್ಪ ವಠಾರ, ಮಹೇಶ ಶಿವಗದಿಗಿ, ಬಸವರಾಜ ಹಂಚಿಗೆ, ಮಲ್ಲು ಸಾವಕಾರ, ಶಿವಾನಂದ ಯಡಹಳ್ಳಿ, ದೀಪ ಮಾರ್ನೂರ, ಅಶೋಕ ಜಾಧವ, ದುರ್ಗಪ್ಪ ಬೂದಿಹಾಳ ಏನು ಹಿಪ್ಪರಗಿ, ಮುತ್ತುರಾಜ ಹೊನಗೊಂಡ ಮಲ್ಲುಗೌಡ ಬಿರಾದಾರ ಮತ್ತಿತರಿದ್ದರು. ತಹಸೀಲ್ದಾರ ನಾಗೇಂದ್ರ ಕೋಳಶೆಟ್ಟಿ ಇವರಿಗೆ ಮನವಿ ಸಲ್ಲಿಸಿದರು.

# ಕುಡಿಯುವ ನೀರಿಗೆ ಮುನ್ನೆಚ್ಚರಿಕೆ: ಸಿಇಒ ರಿಷಿ ಆನಂದ



**ಅ.ಶ. ಸುದ್ದಿ ವಿಜಯಪುರ**

**ವಿಜಯಪುರ: ಮುಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು ಹಾಗೂ ಜಲಜೀವನ್ ಮಿಷನ್ ಸೇರಿದಂತೆ ವಿವಿಧ ಯೋಜನೆಗಳ ಕಾಮಗಾ-ರಿಗಳನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಒ ರಿಷಿ ಆನಂದ್ ಅಧಿಕಾರಿಗಳಿಗೆ ಸೂಚಿಸಿದರು.**

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಳೆ ಕೊರತೆಯ ಸಾಧ್ಯತೆ ಇರುವುದರಿಂದ ಟಾಸ್ಕ್‌ಫೋರ್ಸ್ ಅನುದಾನವನ್ನು ಅಗತ್ಯವಿರುವ ಕಡೆ ಮಾತ್ರ ಬಳಸಬೇಕು ಎಂದರು. ಅನಗತ್ಯ ಬೋರ್‌ವೆಲ್‌ಗಳ ಕೊರೆಯುವಿಕೆಯನ್ನು ನಿಯಂತ್ರಿಸಿ, ತೀವ್ರ ನೀರಿನ ಅಭಾವವಿರುವ ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲು ಕ್ರಮ ಕೈಗೊಳ್ಳಬೇಕು. ತಾಲೂಕು ಮಟ್ಟದಲ್ಲಿ ಇಂಜಿನಿಯರ್‌ಗಳು ಹಾಗೂ ಇಒಗಳು ಪ್ರತಿ ವಾರ ಜಂಟಿ ಸಭೆ ನಡೆಸಿ ಸಮಸ್ಯಾತ್ಮಕ ಗ್ರಾಮಗಳ ಪಟ್ಟಿಯನ್ನು ಸಲ್ಲಿಸಬೇಕು ಎಂದು ನಿರ್ದೇಶಿಸಿದರು.

ಜಿಲ್ಲೆಯ 1,000 ಜಲಜೀವನ್ ಮಿಷನ್ ಕಾಮಗಾರಿಗಳ ಪೈಕಿ 841 ಪೂರ್ಣಗೊಂಡಿವೆ. 654 ಗ್ರಾಮಗಳಲ್ಲಿ 367 ಗ್ರಾಮಗಳು 'ಹರ್ ಘರ್ ಜಲ್' ಆಪ್‌ನಲ್ಲಿ ಪ್ರಮಾಣೀಕರಿಸಲ್ಪಟ್ಟಿದ್ದು, ಉಳಿದ 287 ಗ್ರಾಮಗಳ ಪ್ರಕ್ರಿಯೆ ವೇಗಗೊಳಿಸಲು ಸೂಚಿಸಲಾಗಿದೆ. ಜಿಲ್ಲೆಯ 4.64 ಲಕ್ಷ ಗ್ರಾಮೀಣ ಮನೆಗಳ ಪೈಕಿ 4.15 ಲಕ್ಷ ಮನೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸಲಾಗಿದೆ. ಬಾಕಿ ಮನೆಗಳಿಗೂ ನಿಗದಿತ ಅವಧಿಯಲ್ಲಿ ಸಂಪರ್ಕ ನೀಡಲು ಅಧಿಕಾರಿಗಳಿಗೆ ಸೂಚಿಸಲಾಯಿತು.

# ಹಿರಿಯ ರಾಜಕೀಯ ಧುರೀಣ ಖಾಶೀಮ್ ಸಾಬ ತಳಕಲ್ ನಿಧನಕ್ಕೆ ಗಣ್ಯರ ಕಂಬನಿ

**ಅ.ಶ. ಸುದ್ದಿ ಕುಕನೂರು**

**ಕುಕನೂರು: ಪಟ್ಟಣದ ಹಿರಿಯ ಜೀವಿ, ಮುಸ್ಲಿಂ ಸಮಾಜದ ಮುಖಂಡ ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಖಾಶೀಮ್ ಸಾಬ್ ತಳಕಲ್ (80) ಅವರು ಮಂಗಳವಾರ ಅನಾರೋಗ್ಯದಿಂದ ನಿಧನರಾದರು. ಹಿರಿಯ ರಾಜಕೀಯ ಧುರೀಣರಾಗಿದ್ದ ಖಾಶೀಮ್ ಸಾಬ್ ತಳಕಲ್ ಅವರು ಸಾಮಾಜಿಕ ಕಾಳಜಿ ಮತ್ತು ಸರ್ವ ಸಮುದಾಯದವರೊಂದಿಗೆ ಹೊಂದಿದ್ದ ಆತ್ಮೀಯ ಒಡನಾಟದ ಮೂಲಕ ಜನಮನ ಗೆದ್ದಿದ್ದರು. ಅವರ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ವಿವಿಧ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಮುಖಂಡರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.**

ಖಾಶೀಮ್ ಸಾಬ್ ತಳಕಲ್ ಅವರು ರಾಜ್ಯದ ಹಿರಿಯ ರಾಜಕಾರಣಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಅಪರೂಪದ ರಾಜಕೀಯ ವ್ಯಕ್ತಿಯಾಗಿದ್ದರು. ಅವರ ಅಗಲಿಕೆ ಅತ್ಯಂತ ನೋವು ಮತ್ತು ವಿಷಾದವನ್ನುಂಟು ಮಾಡಿದೆ ಎಂದು ಈರಪ್ಪ ಕುಡುಗುಂಟಿ ಸಂತಾಪ ಸೂಚಿಸಿದರು. ಖಾಶೀಮ್ ಸಾಬ್ ಅವರು ಸಾಮಾಜಿ-ಕ ಚಿಂತಕರಾಗಿದ್ದು, ಯಾವುದೇ ಜಾತಿ-ಧರ್ಮದ ಭೇದವಿಲ್ಲದೆ ಸರ್ವ ಸಮುದಾಯದವರನ್ನು ಪ್ರೀತಿಯಿಂದ ಕಾಣುತ್ತಿದ್ದರು. ಎಲ್ಲಾ ವರ್ಗದ ಜನರೊಂದಿಗೆ ಉತ್ತಮ ಒಡನಾಟ ಹೊಂದಿದ್ದ



ಇಂತಹ ವ್ಯಕ್ತಿಯನ್ನು ಕಳೆದುಕೊಂಡಿರುವುದು ತುಂಬಲಾರದ ನಷ್ಟವಾಗಿದೆ. ಅವರ ಆತ್ಮಕ್ಕೆ ಭಗವಂತ ಶಾಂತಿ ಕರುಣಿಸಲಿ ಎಂದು ಅವರು ಪ್ರಾರ್ಥಿಸಿದರು. ನವೀನಕುಮಾರ ಗುಳಗಣ್ಣವರ ಮಾತನಾಡಿ, ಪ್ರಭಾವಿ ಮುಖಂಡರಾಗಿ ಸರ್ವ ಸಮುದಾಯದ ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಖಾಶೀಮ್ ಸಾಬ್ ಅವರ ನಿಧನದ ಸುದ್ದಿ ಅತ್ಯಂತ ಆಘಾತ ತಂದಿದೆ.

ಅಗಲಿದ ಮಹಾನ್ ಚೇತನಕ್ಕೆ ಶಾಂತಿ ದೊರೆಯಲಿ ಹಾಗೂ ಅವರ ಕುಟುಂಬ ಸದಸ್ಯರಿಗೆ

> **ಸಚಿವ ರಾಯರಡ್ಡಿ, ಮಾಜಿ ಸಚಿವ ಹಾಲಪ್ಪ ಆಚಾರರಿಂದ ಸಂತಾಪ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಹಾಗೂ ಹಿರಿಯ ಜೀವಿ ಖಾಶೀಮ್ ಸಾಬ್ ತಳಕಲ್ ಅವರ ನಿಧನದ ಸುದ್ದಿ ತಿಳಿದು ರಾಜ್ಯದ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರಡ್ಡಿ ಹಾಗೂ ಮಾಜಿ ಸಚಿವ ಹಾಲಪ್ಪ ಆಚಾರ ಅವರು ದೂರವಾಣಿ ಮೂಲಕ ಕುಟುಂಬ ಸದಸ್ಯರಿಗೆ ಸಂತಾಪ ಸೂಚಿಸಿದ್ದಾರೆ. ಪರ್ಯಾಯ ಹೆಡ್‌ಲೈನ್‌ಗಳು: ಹಿರಿಯ ರಾಜಕೀಯ ಧುರೀಣ ಖಾಶೀಮ್ ಸಾಬ್ ತಳಕಲ್ ನಿಧನಕ್ಕೆ ಗಣ್ಯರ ಕಂಬನಿ ಸರ್ವ ಸಮುದಾಯದ ಪ್ರೀತಿಪಾತ್ರ ಮುಖಂಡ ಖಾಶೀಮ್ ಸಾಬ್ ಇನ್ನಿಲ್ಲ ಖಾಶೀಮ್ ಸಾಬ್ ಅಗಲಿಕೆ ತಾಲ್ಲೂಕಿಗೆ ತುಂಬಲಾರದ ನಷ್ಟ ಹಿರಿಯ ಕಾಂಗ್ರೆಸ್ ಮುಖಂಡ ಖಾಶೀಮ್ ಸಾಬ್ ನಿಧನ: ಗಣ್ಯರಿಂದ ಸಂತಾಪದ ಮಹಾಪೂರ ಜನಪರ ಚಿಂತಕ ಖಾಶೀಮ್ ಸಾಬ್ ತಳಕಲ್ ನಿಧನಕ್ಕೆ ವ್ಯಾಪಕ ಸಂತಾಪ**

ಈ ದುಃಖವನ್ನು ಭರಿಸುವ ಶಕ್ತಿಯನ್ನು ಪರಮಾತ್ಮನು ಕರುಣಿಸಲಿ ಎಂದು ಸಂತಾಪ ಸೂಚಿಸಿದರು. ಚೆಂಡೂರ ಗ್ರಾಮದ ಜಗನ್ನಾಥ ಗೌಡ್ರ ಮಾತನಾಡಿ, ಖಾಶೀಮ್ ಸಾಬ್ ಅವರು ಹಿರಿಯ ರಾಜಕೀಯ ಮುತ್ಸದ್ದಿಗಳಾಗಿದ್ದು, ಖಾದಿ ಗ್ರಾಮೋದ್ಯೋಗದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಸಮಾಜದ ಅಭಿವೃದ್ಧಿಯ ಬಗ್ಗೆ ಸದಾ ಚಿಂತಿಸುತ್ತಿದ್ದ ಅವರು ಖಾದಿ ಗ್ರಾಮೋದ್ಯೋಗವನ್ನು ಇನ್ನಷ್ಟು ಉನ್ನತ ಮಟ್ಟಕ್ಕೆ ಬೆಳೆಸುವ ಕನಸು ಹೊಂದಿದ್ದರು. ಇಂತಹ ಹಿರಿಯ ವ್ಯಕ್ತಿತ್ವದ ಅಗಲಿಕೆ ತಾಲ್ಲೂಕಿಗೆ ದೊಡ್ಡ ನಷ್ಟವಾಗಿದೆ ಎಂದು ಹೇಳಿದರು.

ಮೃತರ ಆತ್ಮಕ್ಕೆ ಅಲ್ಲಾಹನು ಶಾಂತಿ ದಯಪಾಲಿಸಲಿ ಹಾಗೂ ಕುಟುಂಬ ವರ್ಗದವ-ರಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ವಿವಿಧ ಗಣ್ಯರು ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಪಟ್ಟಣದ ಮುಖಂಡರಾದ ಜಶವಂತರಾಜ್ ಜೈನ್, ಶಿವಕುಮಾರ ನಾಗಲಾಪೂರಮಠ, ಸಾಹಿತಿಗಳಾದ ಡಾ. ಕೆ.ಬಿ. ಬ್ಯಾಳಿ, ಆರ್.ಪಿ. ರಾಜೂರು, ಎಂ.ಎಸ್. ಹಿರೇಮಠ, ಸಿದ್ದಯ್ಯ ಕಳ್ಳಿಮಠ, ರಾಮಣ್ಣ ಮುಂದಲಮನಿ, ಸಿದ್ದು ಉಳ್ಳಾಗಡ್ಡಿ, ಈರಪ್ಪ ಗುತ್ತಿ, ರೆಹಮಾನ್ ಸಾಬ್ ಮಕ್ಕಪ್ಪನವರ್, ಕಳಕಪ್ಪ ಕಂಬಳಿ, ಸಿದ್ದಲಿಂಗಯ್ಯ ಹಿರೇಮಠ, ಸಿದ್ದಲಿಂಗಯ್ಯ ಬಂಡಿ, ಈರಣ್ಣ ಅಣ್ಣಿಗೇರಿ, ಪರಶುರಾಮ ಸಕ್ರಣ್ಣವರ, ಜಯಸಿಂಗರಾವ್ ಜಾಧವ್, ಯಮನೂರಪ್ಪ ಗೊರ್ಲೆಕೊಪ್ಪ, ನಿಂಗಪ್ಪ ಗೊರ್ಲೆಕೊಪ್ಪ, ಗಗನ ನೋಟಗಾರ, ರಫೀಸಾಬ್ ಹಿರೇಹಾಳ, ಯುವರಾಜ್ ಜಾಧವ್, ಶೇಖಪ್ಪ ಕಂಬಳಿ ಸೇರಿದಂತೆ ಗ್ರಾಮದ ಸರ್ವ ಸಮಾಜದ ಮುಖಂಡರು ಹಾಗೂ ಗಣ್ಯರು ಖಾಶೀಮ್ ಸಾಬ್ ಅವರ ನಿಧನಕ್ಕೆ ಕಂಬನಿ ಮಿಡಿದು ಸಂತಾಪ ಸೂಚಿಸಿದರು.

# ಲೇಖಕರ ದಿನಚರಿ...

## 'ಸೂರ್ಯನ ಚೂರುಗಳು'

ನಮ್ಮ ಕಾಲದ ಸಾರಸ್ವತ ಲೋಕದ ತಾರೆಗಳ ನಿಜಮುಖವನ್ನು ಅನಾವರಣಗೊಳಿಸುವ ದರ್ಪಣದಂತಿದೆ. ಕನ್ನಡದಲ್ಲಿ ಪ್ರಕಟವಾಗಿರುವ ವ್ಯಕ್ತಿಚಿತ್ರಗಳಿಗಿಂತ ಭಿನ್ನವೂ ಅನನ್ಯವೂ ಸ್ವೋಪಜ್ಞವೂ ಆದ ಬರಹಗಳಿವು. ಎಪ್ಪತ್ತರ ದಶಕದಿಂದೀಚೆಗಿನ ಸಾಂಸ್ಕೃತಿಕ ಚಲನೆಗಳ ಹಿಂದಣ ಶಕ್ತಿ ಕೇಂದ್ರವಾಗಿದ್ದ ಜಿ.ಎಸ್. ಶಿವರುದ್ರಪ್ಪ, ಯು.ಆರ್. ಅನಂತಮೂರ್ತಿ, ಪಿ. ಲಂಕೇಶ್, ಕಂಬಾರ, ಸಿದ್ಧಲಿಂಗಯ್ಯ, ಚೆನ್ನಣ್ಣ ವಾಲೀಕಾರ, ಮಲ್ಲೇಪುರಂ ಮುಂತಾದ ದೊಡ್ಡ ಲೇಖಕರ ವ್ಯಕ್ತಿತ್ವಗಳನ್ನು ಅನನ್ಯವಾಗಿ ಹಿಡಿದಿಡುವ, ತಮ್ಮ ವ್ಯಾಪಕವಾದ ಜೀವನಾನುಭವ ಮತ್ತು ಆಳವಾದ ಅಧ್ಯಯನಗಳ ಫಲಿತದಿಂದ ಪಕ್ಷಾತೀತವಾಗಿ ಚರ್ಚಿಸುವ, ವಿಶ್ಲೇಷಿಸುವ ಪ್ರಯತ್ನವನ್ನು ಈ ಬರಹದಲ್ಲಿ ಕಾಣಬಲ್ಲೆವು. ತಮ್ಮ ಅನುಭವಗಳನ್ನು ದಾಖಲಿಸುವಾಗ ಕುಂ.ವೀ.ಯವರು ಕಾಪಾಡಿಕೊಂಡಿರುವ ಖಚಿತತೆ, ನಿರ್ದಾಕ್ಷಿಣ್ಯಪರತೆ, ನಿರ್ಭೀತಿ, ಧೈರ್ಯ ಮತ್ತು ಪ್ರಾಮಾಣಿಕತೆಗಳು ಈ ಬರಹಗಳ ಹಿಂದಿರುವ ದೊಡ್ಡಶಕ್ತಿ. ಸತ್ಯ ನಿಷ್ಠುರತೆಗಳು ಮೈದುಂಬಿಕೊಂಡಿರುವ ಇಲ್ಲಿನ ಚಿತ್ರಗಳಲ್ಲಿ ದೊಡ್ಡವರೆನ್ನಿಸಿಕೊಂಡವರ ಸಣ್ಣತನಗಳು, ಪ್ರತಿಭೆಯನ್ನು ಸಹಿಸದ ಹೊಟ್ಟೆಕಿಚ್ಚು, ಅವಜ್ಞತೆಯ ಜಾಣತನ, ಅಸಹಿಷ್ಣುತೆ, ಅವಕಾಶವಾದಿತನ ಮುಂತಾದ ಗುಣಗಳು ಮುನ್ನೆಲೆಗೆ ಬಂದು, ನಮ್ಮ ಸಾರಸ್ವತ ಲೋಕದ ಅನೇಕ ತಾರೆಗಳ ಬಣ್ಣ ಕಳಚುತ್ತವೆ. ಹೀಗೆ ಮಾಡುವಾಗ ಆಯಾ ಲೇಖಕರ ಬರಹದ ಶಕ್ತಿಯನ್ನು ಮೆಚ್ಚುವ ಉದಾರತೆಯನ್ನು ಲೇಖಕರು ಕಾಪಾಡಿಕೊಂಡಿರುವುದು ಗಮನಾರ್ಹ. ಇಪ್ಪತ್ತನೆಯ ಶತಮಾನದ ಕೊನೆಯ ಮೂರು ದಶಕಗಳಿಂದ ಮೊದಲುಗೊಳ್ಳುವ ಈ ಬರಹಗಳು ಅಗೋಚರವಾಗಿರುವ ಹಲವು ಸಂಗತಿಗಳತ್ತ ಬೆಳಕು ಬೀರುತ್ತಲೇ ಲೇಖಕರ ವೈಯಕ್ತಿಕ ಬದುಕಿನ ಚಿತ್ರಗಳನ್ನೂ ಕಾಣಿಸುತ್ತ ಸಾಗುತ್ತದೆ. ಕುಂ.ವೀಯವರ ಬದುಕಿನಲ್ಲಿ ಅನ್ನದೇವರಂತೆ ಬಂದು ಕಾಪಾಡಿದ 'ದುರುಗ್ಯಾ ನಾಯಕ' ಎಂಬ ಅತಿ ಸಾಮಾನ್ಯ ಜೀವಿಯ ಚಿತ್ರಣವಂತೂ ಉಳಿದೆಲ್ಲ ಮಹಾತಾರೆಯರ ಚಿತ್ರಗಳನ್ನು ಮಸುಕಾಗಿಸುವಂತೆ ಬೆಳಗಿದೆ. ಅನೇಕ ಹಿರಿಯ ಲೇಖಕರ ಸೋಗಲಾಡಿತನವನ್ನು ಬಿಚ್ಚಿಡುವ ಕುಂವೀಯವರು ಎಲ್ಲಿಯೂ ತಮ್ಮ ವ್ಯಂಗ್ಯ, ವಿಡಂಬನೆ, ವಿನೋದ ಶೈಲಿಯನ್ನು ಬಿಟ್ಟುಕೊಟ್ಟಿಲ್ಲ. ಕುವೆಂಪು ಅವರ 'ದರುಶ'ನದ ಸನ್ನಿವೇಶ, ಶಿವರುದ್ರಪ್ಪನವರ ಕಾರ್



ಡ್ರೈವಿಂಗ್, ಹೆಸರಿನಿಂದ ಸಿದ್ಧಲಿಂಗಯ್ಯನವರು ಲಿಂಗಾಯತರಿರಬಹುದೆಂದು ಭಾವಿಸಿದ ಪ್ರಸಂಗದ ಪೇಚಾಟಗಳನ್ನು ಓದಿದವರು ನಗದಿರಲು ಸಾಧ್ಯವಾಗದು. ಅಗ್ರಹಾರ ಕೃಷ್ಣಮೂರ್ತಿಯವರು ದೆಹಲಿ ಕೇಂದ್ರಿತವಾಗಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯವ್ಯಾಪ್ತಿಯನ್ನು ಬೆಂಗಳೂ-ರಿಗೆ ತಂದ, ಗೋಷ್ಠಿಗಳನ್ನು ಕೊಟ್ಟೂರಿನಂತಹ ಪುಟ್ಟ ಪಟ್ಟಣದವರೆಗೆ ವಿಸ್ತರಿಸಿದ ಬಗ್ಗೆ ತುಂಬು ಹೃದಯದಿಂದ ಮೆಚ್ಚಿ ಕುಂವೀ ಅಗ್ರಹಾರ ಅವರ ಕಾರ್ಯವೈಖರಿ, ಕರ್ತೃತ್ವಶಕ್ತಿಗಳನ್ನು ದಾಖಲಿಸಿದ್ದಾರೆ. ಆದರೆ ಅಗ್ರಹಾರ ಅವರು ತಮ್ಮ 'ನಾಡವರ್ಗಳ್' ಕೃತಿಯಲ್ಲಿ ಕುಂವೀ ಬಗ್ಗೆ ಬರೆಯಬಹುದಾದ ಅವಕಾಶವನ್ನು ಕೃಪಣಗುಣದಿಂದ ಕಳೆದುಕೊಂಡಿರುವುದು, ಜಯಂತ ಕಾಯ್ಕಿಣಿ ಕಥೆಗಳನ್ನು ಮೆಚ್ಚಿ ಕುಂವೀ ಕಥೆಗಳ ಬಗ್ಗೆ ಚಕಾರವೆತ್ತದ ಸಂದರ್ಭದ ಮುಂದುವರಿಕೆಯಾಗಿ ಕಾಣುತ್ತದೆ. ಜಾತಿ ರಾಜ-ಕಾರಣಗಳು ಸಾಹಿತ್ಯವನ್ನು ನಿರ್ದೇಶಿಸುತ್ತಿರುವ ಪರಿಗೆ ಇದೊಂದು ಉತ್ತಮ ಉದಾಹರಣೆಯಂತಿದೆ. ಈ ಹೊತ್ತು ನಮ್ಮ ಸಾರಸ್ವತ ಲೋಕವನ್ನು ಆಳುತ್ತಿರುವ 'ಪ್ರಶಸ್ತಿ'ಗಳನ್ನು ಪಡೆದುಕೊಳ್ಳುವ, ಹೊಡೆದುಕೊಳ್ಳುವ ಮತ್ತು ಕೊಡುವವರ 'ರಾಜಕಾರಣ' ನಡೆಯನ್ನು ಮುಲಾಜಿಲ್ಲದೆ ಬೆತ್ತಲೆಗೊಳಿಸುವಾಗ ಕುಂವೀಯವ-ರಿಗೆ ಮಾತ್ರ ಸಾಧ್ಯವಾಗಬಹುದಾದ ದಿಟ್ಟತನವನ್ನು ಈ ಕೃತಿಯಲ್ಲಿ ನಾವು ಮನಗಾಣಬಹುದು. ವಚನ ಸಾಹಿತ್ಯದ ಸತ್ವದ ಬಗ್ಗೆ ಸೊಲ್ಲೆತ್ತದ ಅನಂತಮೂರ್ತಿಯವರು ಕರ್ನಾಟಕ ಸರ್ಕಾರ ಕೊಡಮಾಡುವ ಬಸವಶ್ರೀ ಪ್ರಶಸ್ತಿಯನ್ನು ಪಡೆದ ಅನೈತಿಕತೆಯಿಂದ ಮೊದಲ್ಗೊಂಡು ಜ್ಞಾನಪೀಠ, ಕೇಂದ್ರ ಸಾಹಿತ್ಯ ಅಕಾಡೆಮಿಗಳಂತಹ ಮಹತ್ವದ ಪ್ರಶಸ್ತಿಗಳು ತೀರ್ಮಾನವಾಗುವ ಹಿಂದಿನ ರಾಜ-ಕೀಯಗಳವರೆಗೆ ಈ ಕೃತಿಯ ಹರಹಿದೆ. ಪ್ರಶಸ್ತಿಗಳ ಹಪಾಹಪಿಯನ್ನು ತೊರೆದು, ತಮ್ಮ ಪಾಡಿಗೆ ತಾವು ಬೇಕಿನಿಸಿದ್ದನ್ನು ಬರೆದುಕೊಂಡಿರುವುದು ಹಿತಕರವೆಂಬ ಸಂದೇಶವನ್ನು ನಮ್ಮ ಹೊಸ ತಲೆಮಾ-ರಿನ ಬರಹಗಾರ-ರಿಗೆ ಪರೋಕ್ಷವಾಗಿ ಈ ಕೃತಿ ದಾಟಿಸುತ್ತದೆ. ಕುಂವೀಯವರ ಗದ್ಯದ ಮೋಹಕಶೈಲಿ, ಹ-ರಿತವೂ ತೀಕ್ಷ್ಣವೂ ಆದ ವಿಡಂಬನೆಯ ಬರಹದ ಶೈಲಿ, ಸಾಹಿತ್ಯದ ಬಗ್ಗೆ, ಬದುಕಿನ ಬಗ್ಗೆ ಅವ-ರಿಗಿರುವ ಅಪಾರವಾದ ಕಾಳಜಿ, ಆಸಕ್ತಿಯ ಹರಹು ಇಲ್ಲಿನ ವ್ಯಕ್ತಿಚಿತ್ರಗಳಲ್ಲಿ ಮಿಂಚಿದೆ. ಜನಸಾಮಾನ್ಯರ ದೃಷ್ಟಿಕೋನದ ಮೂಲಕ ಬಿತ್ತರಗೊಂಡಿರುವ ಒಂದು ಕಾಲದ ಸಾಹಿತ್ಯ ಚರಿತ್ರೆಯಾಗಿಯೂ ಈ ಕೃತಿಯನ್ನು ನಾವು ಪರಿಭಾವಿಸಬೇಕು ಎಂಬುದಕ್ಕೆ ಕುಂವೀಯವರ ಚಿಂತನಾಕ್ರಮ ಮತ್ತು ಸಂವೇದನಾಶೀಲ ವಿಚಾರಧಾರೆಗಳು ಆದ-ರಾರವಾಗಿವೆ. ಸಾಹಿತ್ಯವೆಂಬ ಸಂಸ್ಥೆಯನ್ನು ಅದರ ಎಲ್ಲ ಅವತಾರಗಳಲ್ಲಿ ಕಾಣಿಸುವ ಕಲಾಸೂಕ್ಷ್ಮತೆ ಮತ್ತು ಜವಾಬ್ದಾರಿಗಳು ಈ ಬರಹಗಳ ಹಿಂದಿರುವ ದೊಡ್ಡಶಕ್ತಿಯಾಗಿದೆ. ಕುಂವೀಯವರ ಕ್ಯಾಮರಾ ಕಣ್ಣು ಲೇಖಕರು, ಕಲಾವಿದರು, ಕಾರ್ಪಣ್ಯದ ಬದುಕಿನ ಬಡಜೀವಗಳನ್ನು ಸೆರೆಹಿಡಿದಿದೆ. ಇಂತಹ ಎಚ್ಚರಗಣ್ಣಿನ ಬರಹಗಳೇ ನಮ್ಮ ನಿಜದ ಸಾಂಸ್ಕೃತಿಕ ಚರಿತ್ರೆಯನ್ನು ಅರ್ಥ ಮಾಡಿಸುವಂಥವು.



ಡಾ.ಎಚ್.ಎಸ್. ಸತ್ಯನಾರಾಯಣ.

## ಭಾವತರಂಗ (ಗಜಲ್ ಸಂಕಲನ)

ಕನ್ನಡ ಕಾವ್ಯ ಲೋಕದಲ್ಲಿ ಗಜಲ್ ಎನ್ನುವುದು ಇಂದು ಕೇವಲ ರಾಜಮನೆತನದ ಅಂ-ದಣಗಳನ್ನೋ ಅಥವಾ ಕೇವಲ ಪ್ರಣಯ-ವಿರಹದ ನವಿರು ಭಾವಗಳನ್ನೋ ಮಾತ್ರ ಹೊತ್ತುಕೊಂಡು ತಿರುಗುವ ಕಲೆಯಾಗಿ ಉಳಿದಿಲ್ಲ. ಬದಲಿಗೆ, ಮನುಷ್ಯನ ಅಸ್ತಿತ್ವದ ಆಳವಾದ ಬಿಕ್ಕಟ್ಟುಗಳನ್ನು, ವರ್ತಮಾನದ ರಾಜಕೀಯ-ಸಾಮಾಜಿಕ ಕಟು ವಾಸ್ತವಗಳನ್ನು ಹಾಗೂ ತತ್ವಜ್ಞಾನದ ಗಂಭೀರ ಮಗ್ಗಲುಗಳನ್ನು ಅತ್ಯಂತ ಶಕ್ತಿಯುತವಾಗಿ ದಾಖಲಿಸುವ ಪ್ರಧಾನ ಮಾಧ್ಯಮವಾಗಿ ರೂಪುಗೊಳ್ಳುತ್ತಿದೆ.

ಈ ಸಾಹಿತ್ಯಿಕ ಪಯಣದಲ್ಲಿ ಗಜಲಗೊ ಶರಣಗೌಡ ಪಾಟೀಲ್ ಜೈನಾಪೂರು ಅವರ 'ಭಾವತರಂಗ' ಎನ್ನುವ ಗಜಲ್ ಸಂಕಲನವು ವಿಶಿಷ್ಟವಾದ ಹಾಗೂ ಗಂಭೀರವಾದ ಮೈಲಿಗಲ್ಲಾಗಿ ನಮ್ಮ ಮುಂದೆ ನಿಲ್ಲುತ್ತದೆ. ಕಲ್ಯಾಣ ಕರ್ನಾಟಕದ ಸಗರ ನಾಡಿನ ಸಾಂಸ್ಕೃತಿಕ ಬೇರುಗಳಿಂದ ಎದ್ದುಬಂದಿರುವ ಈ ಕೃತಿಯು, ಕೇವಲ ಭಾವನೆಗಳ ಅಲೆಯಾಟವಲ್ಲ, ಅದು ಬದುಕಿನ ನೈಜ ನೆಲೆಗಳನ್ನು ಶೋಧಿಸುವ ತಾತ್ವಿಕ ದರ್ಶನ. ಕೃತಿ ಮತ್ತು ಕವಿಯ ಸಾಂಸ್ಕೃತಿಕ ಹಿನ್ನೆಲೆ. ಸಗರ ನಾಡಿನ ಕೊನೆಯ ವಚನಕಾರರಾದ ಷಣ್ಮುಖ ಶಿವಯೋಗಿಗಳ ನೆಲೆಯಾದ ಜೇವರ್ಗಿ ತಾಲೂಕಿನ ಜೈನಾಪುರದವರಾದ ಶರಣಗೌಡ ಪಾಟೀಲ್ ಅವರು, ಈಶ್ವರಪ್ಪಗೌಡ ಮತ್ತು ಕಮಲಮ್ಮ ದಂಪತಿಗಳ ಸುಪುತ್ರರು.

ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ 3ನೇ ರ್ಯಾಂಕ್ ಪಡೆದು ಉತ್ತೀರ್ಣರಾಗಿ, ಮೈಸೂರು ವಿಶ್ವವಿಧ್ಯಾಲಯದಲಿ ಕನ್ನಡ ಸ್ನಾತಕೋತ್ತರ ಪದವಿ ತನು ಪಡೆದು, ರಂಗಂಪೇಟ ನ, ಡಾ. ಅಂಬೇಡ್ಕರ್ ಅನುದಾನಿತ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಹಾಗೂ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಕ್ರಿಯರಾಗಿರುವ ಇವರು ಜೇವರ್ಗಿ ತಾಲೂಕು ಮಟ್ಟದ 5ನೇ ಶರಣ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿಯೂ, ಕನ್ನಡ ಸಾಹಿತ್ಯ ಸಂಘ (ರಂಗಂಪೇಟೆ) ಉಪಾಧ್ಯಕ್ಷರಾಗಿಯೂ ಮತ್ತು ಕರ್ನಾಟಕ ಜಾನಪದ ಪರಿಷತ್ತ ಸುರಪುರಿನ ತಾಲೂಕು ಘಟಕದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿರುವರು.

ಚುಟುಕು, ಆಧುನಿಕ ವಚನ, ಚಿಂತನೆ, ಕವಿತೆ ಹಾಗೂ ಗಜಲ್ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಇವರ ಹಲವು ಚಿಂತನೆಗಳು ಮತ್ತು ಪುಸ್ತಕ ವಿಮರ್ಶೆಗಳು ಕಲಬುರಗಿ ಆಕಾಶವಾಣಿಯಲ್ಲಿ ಪ್ರಸಾರಗೊಂಡಿವೆ. ಮಾತು ಮೌನದ ಮಧ್ಯೆ, ಚುಟುಕು ಚಟಾಕಿ ಚುಟುಕುಗಳು, 'ಮೌನ ಮಾತಾದಾಗ, 'ಅಪ್ಪಾ ದಿ ಗ್ರೇಟ್, ಹಾಗೂ ಇತರ ಲೇಖನಗಳು', 'ಕಾಮರ್ಸ್ ದಿ ವೆ ಆಫ್ ಲೈಫ್' (ಶಬ್ದಕೋಶ), 'ಅಂತರಂಗದ ಮೃದಂಗ' ಮುಂತಾದ ಕೃತಿಗಳನ್ನು ರಚಿಸಿರುವ ಇವರ ಈ 'ಭಾವತರಂಗ' ಗಜಲ್ ಕೃತಿಯು (2022) ನಿರಂಜನ ಪ್ರಕಾಶನ ಜೇವರ್ಗಿಯಿಂದ ಪ್ರಕಟಗೊಂಡಿದ್ದು, ಇದಕ್ಕೆ ಡಾ.ಸಿದ್ದರಾಮ ಹೊನ್ಕಲ್ ರವರ ಮುನ್ನುಡಿ ಹಾಗೂ ಪ್ರೊ. ಕಾಸಿನಾಥ್ ಅಂಬಲಗಿ ಅವರ ಬೆನ್ನುಡಿ ಬರೆದಿದ್ದಾರೆ.

ಕನ್ನಡದಲ್ಲಿ ಗಜಲ್ ಬೆಳೆದು ಬಂದ ಪರಂಪರೆ ಮೂಲತಃ ಅರಬ್ಬಿ ಭಾಷೆಯದಾಗಿ ಪರ್ಷಿಯನ್ ದೇಶದಲ್ಲಿ ಬೆಳೆದು ನಂತರ ಉರ್ದುವಿನ ರಾಣಿಯಾಗಿ ಮೆರೆದ ಗಜಲ್ ಸಾಹಿತ್ಯವನ್ನು ಕನ್ನಡಕ್ಕೆ ತಂದವರು ಮೂಲಪುರುಷ




ಶಾಂತರಸರು. ನಂತರ ಅವರ ಸುಪುತ್ರಿ ಮುಕ್ತಾಯಕ್ಕ, ಡಾ. ದೇವೇಂದ್ರಕುಮಾರ ಹಕಾರಿ, ಪಂಚಾಕ್ಷರಿ ಹಿರೇಮಠ್, ಡಾ. ಕೆ. ಮುದ್ದಣ್ಣ ಹಾಗೂ ತನ್ನಾ ತಿಮ್ಮಾಪುರಿ ಮುಂತಾದವರು ಗಜಲ್ ಅನ್ನು ಕನ್ನಡ ನೆಲದಲ್ಲಿ ವಿಸ್ತರಿಸಿದರು. ಈ ಪ್ರೌಢ ಪರಂಪರೆಗೆ ಹೊಸ ಆಯಾಮವನ್ನು ನೀಡುತ್ತಾ, ಶರಣಗೌಡ ಪಾಟೀಲರು ಗಜಲ್‌ನ ನಿಯಮಬದ್ಧ ಚೌಕಟ್ಟಾದ 'ಮತ್ಲ', 'ಮಖ್ತಾ', 'ಶೇರ್', 'ರದೀಫ್' ಮತ್ತು 'ಕಾಫಿಯಾ'ಗಳ ಕಟ್ಟುಪಾಡಿನೊಳಗೆಯೇ ಆಧುನಿಕ ಬದುಕಿನ ತಾಕಲಾಟಗಳನ್ನು ಅತ್ಯಂತ ಸಮರ್ಥವಾಗಿ ಹೆಣೆದಿದ್ದಾರೆ. ಗಜಲ್‌ನಲ್ಲಿ ಬರುವ ಪ್ರತಿಯೊಂದು ಖಾಫಿಯಾ ಹಾಗೂ ರದೀಫ್, ಕೇವಲ ಪ್ರಾಸಕ್ಕಾಗಿ ಬಂದ ಅಲಂಕಾರಿಕ ಪದವಲ್ಲ, ಬದಲಿಗೆ ಅದೊಂದು ಬದುಕಿನ ತೀವ್ರತೆಯನ್ನು ಅಳೆವ ಅಳತೆಗೋಲು.

ಈ ಕೃತಿಯ ಕೆಲ ಗಜಲ್ ಗಳ ಅವಲೋಕನ **ಗಜಲ್ 1.**

ಅಸ್ತಿತ್ವವಾದಿ ವಿಷಾದ ಮತ್ತು ಕರೋನಾ ಕಾಲದ ಕಲುಷಿತ ನೆನಪುಗಳು ಸಂಕಲನದ ಪ್ರಮುಖ ಹಾಗೂ ಮೊದಲ ಗಜಲ್ ಮಾನವನ ಅಸಹಾಯಕತೆ ಮತ್ತು ಕಾಲದ ಕ್ರೂರತೆಯನ್ನು ಬೆಚ್ಚಿಬೀಳಿಸುವಂತೆ ಬಿಚ್ಚಿಡುತ್ತದೆ. ಕವಿ ಬರೆಯುತ್ತಾರೆ: ಅರಿವಿಲ್ಲದೆ ಬರುವ ಸೋಲು ಗೆಲುವು ನಾ ಹೇಗೆ ಸಹಿಸಲಿ ಸುಳಿವು ಕೊಡದೆ ಬಂದರೆ ಸಾವು ನಾ ಹೇಗೆ ಸಹಿಸಲಿ ಮೊದಲ ಶೇರ್‌ನಲ್ಲಿ ಕವಿ ಬದುಕಿನ ಅನಿಶ್ಚಿತತೆಯನ್ನು ಮುಖಾಮುಖಿ ಮಾಡುತ್ತಾರೆ. ನಾವಂದುಕೊಂಡಂತೆ ಬದುಕು ಸಾಗುವುದಿಲ್ಲ, ಅನಿರೀಕ್ಷಿತ ಸೋಲು-ಗೆಲುವುಗಳು ಮತ್ತು ಅನಿವಾರ್ಯವಾದ ಸಾವು ಮನುಷ್ಯನ ಅಹಂಕಾರವನ್ನು ಅಡಗಿಸುತ್ತದೆ ಎಂಬ ಕಟು ಸತ್ಯ ಇಲ್ಲಿ ವ್ಯಕ್ತವಾಗಿದೆ.

ಮುಂದಿನ ಶೇರ್‌ಗಳಲ್ಲಿ ಕೌಟುಂಬಿಕ ಭದ್ರತೆ ಮತ್ತು ಸಾಮಾಜಿಕ ವಾಸ್ತವಗಳ ನಡುವಿನ ಸಂಘರ್ಷವನ್ನು ತರುತ್ತಾರೆ. "ಘಮಿಸುವ ಮೊದಲೇ ಬಾಡಿತು ಬೆಟ್ಟದ ಹೂವು" ಎಂಬ ಸಾಲು ಕೇವಲ ಪ್ರಕೃತಿಯ ವರ್ಣನೆಯಲ್ಲ; ಅದು ಅಕಾಲಿಕವಾಗಿ ಕಮರಿಹೋಗುವ ನೂರಾರು ತರುಣ ಜೀವಗಳ, ಕನಸುಗಳ ರೂಪಕವಾಗಿದೆ. ಕವಿಯು ಕಾಲಮಾನದ ಸಾಕ್ಷಿಪ್ರಜ್ಞೆ ಎನ್ನುವ ಸತ್ಯವನ್ನು ಇಲ್ಲಿ ಕಾಣಬಹುದು. ಕರುನಾಡಿನ 'ಯುತ್ ಐಕಾನ್', ಪವರ್‌ಸ್ಟಾರ್ ಡಾ. ಪುನೀತ್ ರಾಜಕುಮಾರ್ ಅವರ ಅಕಾಲಿಕ ಮರಣವನ್ನು ಆದರಿಸಿ ನೊಂದ ಮನಸ್ಸಿನಲ್ಲಿ ಕಾಡಿ ಮೂಡಿದ ಭಾವಬಿಂದುಗಳಾಗಿವೆ.

ಅದೇ ರೀತಿ, "ದೇವರೇ ಮಾಡಿದರೆ ಅನ್ಯಾಯ ಕೇಳುವದ್ಯಾರಿಗೆ ಕಲಿಗಾಲದಲಿ" ಎಂದು ಸಾಂಪ್ರದಾಯಿಕ ದೈವದ ಪರಿಕಲ್ಪನೆಯನ್ನು ಕವಿ ಪ್ರಶ್ನಿಸುತ್ತಾರೆ. ಇದು ಇಂದಿನ ಕಲಿಗಾಲದಲ್ಲಿ ನ್ಯಾಯದ ಅಧಃಪತನಕ್ಕೆ ಹಿಡಿದ ಕನ್ನಡಿಯಾಗಿದೆ. ಮಖ್ತಾದಲ್ಲಿ ಕವಿ ವರ್ತಮಾನದ ಬಹುದೊಡ್ಡ ದುರಂತವೊಂದನ್ನು ನಮ್ಮೆದುರು ತೆರೆಯುತ್ತಾರೆ ತಲೆ ಕೆಳಗಾದವು ಜಗದಲಿ ಪಾಪ ಪುಣ್ಯದ ಲೆಕ್ಕ ತಪ್ಪಿ ಹೋಗಿ

ಶರಣನ ಮನಸ್ಸಿನ ಮಾಯದ ಗಾಯವು ನಾ ಹೇಗೆ ಸಹಿಸಲಿ ಇಂದು ಜಗತ್ತಿನಲ್ಲಿ ನೈತಿ-ಕ ಮೌಲ್ಯಗಳು ಪಲ್ಲಟಗೊಂಡಿವೆ. ಯಾವುದು ಪಾಪ, ಯಾವುದು ಪುಣ್ಯ ಎನ್ನುವ ವ್ಯಾಖ್ಯಾನವೇ ತಲೆಕೆಳಗಾಗಿದೆ.

ಇಂತಹ ನೈತಿಕ ಶೂನ್ಯತೆಯನ್ನು ಕಂಡು ಕವಿಯ (ಇಲ್ಲಿ ಬಳಕೆಯಾಗಿರುವ 'ಶರಣ' ಎಂಬ ತಖಲ್ಲುಸ್ ಕವಿಯ ಆತ್ಮಸಾಕ್ಷಿಯೂ ಹೌದು) ಅಂತರಂಗದಲ್ಲಿ ಉಂಟಾಗಿರುವ ಗಾಯವು ಕೇವಲ ಶಾರೀರಿಕವಲ್ಲ, ಅದು ಸಮಾಜದ ವೈಪರೀತ್ಯದಿಂದ ಉಂಟಾದ "ಮಾಯದ ಗಾಯ". ಬದುಕಿನ ಪಯಣ ಮತ್ತು ಅಸ್ತಿತ್ವವಾದಿ ಬಿಕ್ಕಟ್ಟು **(ಗಜಲ್ 21)**

ದಡವಿರದ ಕಡಲಿನ ಬೋಣಿ ಆಗದ ದೋಣಿಯಲ್ಲಿ ಸಾಗುತ್ತಿರುವೆ

ದಿಕ್ಕು ದೆಸೆಗಳು ಗೊತ್ತಿರದೆ ಅಂಬಿಗರ ಜೊತೆ ಪಯಣದಲ್ಲಿ ಸಾಗುತ್ತಿರುವೆ ಈ ಗಜಲ್‌ನ ಮೂಲ ಆಶಯವು ಮಾನವ ಚೇತನದ ಅಸ್ತಿತ್ವವಾದದ ಬಿಕ್ಕಟ್ಟು, ಲೌಕಿಕ ಅನ್ವೇಷಣೆ ಮತ್ತು ಅಂತಿಮವಾಗಿ ಆಧ್ಯಾತ್ಮಿಕ ಶರಣಾಗತಿಯನ್ನು ಧ್ವನಿಸುತ್ತದೆ. ಬದುಕು ಎನ್ನುವುದು ದಡವಿಲ್ಲದ ಕಡಲು ಹಾಗೂ ದಿಕ್ಕ-ರಿಯದ ದೋಣಿಯ ಪಯಣ.

ಈ ಅನಿಶ್ಚಿತತೆಯ ನಡುವೆಯೂ ಮನುಷ್ಯ ಬದುಕನ್ನು ನಿಲ್ಲಿಸದೆ ನಿರಂತರವಾಗಿ ಮುನ್ನಡೆಯಬೇಕಾದ ಅನಿವಾರ್ಯತೆಯನ್ನು ಗಜಲ್ ಪ್ರತಿಪಾದಿಸುತ್ತದೆ. ವೈಯಕ್ತಿಕ ಕಳವಳ ಹಾಗೂ ಗುರಿರಹಿತ ಹುಡುಕಾಟಕ್ಕೆ ಗಜಲ್ಕಾರ ಕಂಡುಕೊಳ್ಳುವ ಪರಿಹಾರ ಸಹಪಥಿಕರಲ್ಲಿ ಪ್ರೀತಿ ಮತ್ತು ಸ್ನೇಹವನ್ನು ಹಂಚುವುದು. ಇದು ಕಾವ್ಯಕ್ಕೆ ಕೇವಲ ಆಧ್ಯಾತ್ಮಿಕ ಚೌಕಟ್ಟನ್ನಷ್ಟೇ ನೀಡದೆ, ಸಾಮಾಜಿಕ ಹೊಣೆಗಾರಿಕೆಯ ಮಾನವತಾವಾದಿ ನೆಲೆಯನ್ನು ಒದಗಿಸುತ್ತದೆ. ಪ್ರಕೃತಿಯಲ್ಲಿನ ಗಿಡಮರಗಳ ವಿನಮ್ರತೆ ಮತ್ತು ತ್ಯಾಗಗುಣದಲ್ಲೇ ನಿಜವಾದ ದೈವತ್ವವಿದೆ ಎಂಬುದನ್ನು ಗುರುತಿಸುವ ಗಜಲ್, ಅಂತಿಮವಾಗಿ ಅಹಂಕಾರವನ್ನು ತೊರೆದು ಜಗನ್ನಿಯಾಮಕನಾದ ಗುರುವಿಗೆ/ಶರಣನಿಗೆ ತನ್ನನ್ನು ತಾನು ಸಂಪೂರ್ಣವಾಗಿ ಸಮರ್ಪಿಸುವ ಮೂಲಕ ಪರಮ ಶಾಂತಿಯನ್ನು ತಲುಪುತ್ತದೆ. *ಸಾವಿನ ಸತ್ಯ ಮತ್ತು ತಾತ್ವಿಕ ಚಿಂತನೆ (ಗಜಲ್ 60):* ಶರಣಗೌಡ ಪಾಟೀಲ್ ಅವರ 60ನೇ ಗಜಲ್ ಐದು ಅಶೇರ್‌ಗಳಿಂದ ರಚನೆಗೊಂಡಿದ್ದು, ಬದುಕಿನ ಅಸ್ತಿತ್ವವಾದ ಮತ್ತು ಮರಣದ ಅನಿವಾರ್ಯತೆಯ ತಾತ್ವಿಕತೆಯನ್ನು ಬಿಂಬಿಸುತ್ತದೆ.

"ಗೆದ್ದ ಕೋಟೆಗಳು" ಹಾಗೂ "ಬಿದ್ದ ಕೋಟೆಗಳು" ಎಂಬ ದ್ವಂದ್ವಗಳ ಮೂಲಕ ಐಹಿಕ ಯಶಸ್ಸು ಮತ್ತು ಸೋಲುಗಳೆರಡೂ ಸಾವಿನೆದುರು ನಶ್ವರ ಎಂಬ ಸತ್ಯವನ್ನು ನಿರೂಪಿಸಿದ್ದಾರೆ. ಮೂರನೆಯ ಅಶೇರ್‌ನಲ್ಲಿ ಬರುವ "ಮೋಜು ಜೂಜು ಮಜಾ" ಪದಬಂಧಗಳು ಸಮಕಾಲೀನ ಭೋಗ ವೈಭೋಗ ಸಮಾಜದ ನೈತಿ-ಕ ಪತನವನ್ನು ಮತ್ತು ಭೌತಿಕ ಸುಖಗಳ ನಶ್ವರತೆಯನ್ನು ತೀಕ್ಷ್ಣವಾಗಿ ವಿಮರ್ಶಿಸಿವೆ. ರಾಗ-ದ್ವೇಷರಹಿತ ಬದುಕು, ಸತ್ಸಂಗ ಹಾಗೂ ಯೋಗಾಚರಣೆಗಳಂತಹ ಉದಾತ್ತ ಮಾರ್ಗಗಳನ್ನು ಅನುಸರಿಸಿದವರೂ ಕೂಡ ಭೌತಿಕ ದೇಹದ ಅಂತಿಮ ಅಂತ್ಯವಾದ ಸಾವನ್ನು ಮೀರಿ ನಿಲ್ಲಲಾರರು ಎಂಬ ಯೋಗ-ತಾತ್ವಿಕ ಸತ್ಯದ ಸಾರವನ್ನು ಇದು ಹರಡುತ್ತದೆ.

ಕೇವಲ ಸಾಂಪ್ರದಾಯಿಕ ಛಂದಸ್ಸಿನ ಮಿತಿಯಲ್ಲದೆ, ಮಾನವ ಜೀವನದ ಸಮಗ್ರ ವರ್ಣಪಟಲವನ್ನು 'ಸಾವು' ಎಂಬ ಮಹಾಸತ್ಯದೊಂದಿಗೆ ಹಿಡಿದು, ಯಾರೂ ಸಾವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಶಾಶ್ವತ ಸತ್ಯವನ್ನು ಬಹು ಮಾರ್ಮಿಕವಾಗಿ ಚಿತ್ರಿಸಲಾಗಿದೆ. *ಸಮಾಜಮುಖಿ ಕಳಕಳಿ, ವ್ಯಂಗ್ಯ ವಿಡಂಬನೆ ಲಗು ಹಾಸ್ಯ ವಿರಹದ ಭಾವ ದ್ವನಿಸುವ ಕೆಲ ಗಜಲ್ ಶೇರ್ ಗಳು ಕವಿಯ ಕಣ್ಣುಗಳು ಕೇವಲ ವೈಯಕ್ತಿಕ ನೋವಿಗೆ ಸೀಮಿತವಾಗಿಲ್ಲ; ವರ್ತಮಾನದ ಹಲವಾರು ದೋಷಗಳನ್ನು ಇವರು ತಮ್ಮ ಗಜಲ್‌ಗಳಲ್ಲಿ ಚಳಕದಿಂದ ಚುಚ್ಚಿದ್ದಾರೆ.

"ಸತ್ಯ ಹೇಳಿ ಸ್ಮಶಾನ ಕಾಯ್ದ ಕಥೆ ವ್ಯಥೆಗಳನ್ನು ನಾವೆಲ್ಲ ಮರೆಯೋಣ / ಸುಳ್ಳು ಹೇಳುವವರು ಅರಸನಾದರೂ ತಿರಸ್ಕರಿಸಬೇಕಾಗಿದೆ ನಾವೆಲ್ಲರೂ ಈಗ" **(ಗಜಲ್ 2).**

ಪ್ರೇಮ ಮತ್ತು ಸಂಬಂಧಗಳ ಶೂನ್ಯತೆ "ಭಾವನೆಗಳೇ ಇಲ್ಲದ ಖಾಲಿ ಕಣ್ಣುಗಳಲ್ಲಿ ಪ್ರೀತಿ ಹುಟ್ಟುವುದು ಹೇಗೆ / ಮನಸ್ಸುಗಳಿಲ್ಲದ ಅರಮನೆಯಲ್ಲಿ ಸಂಬಂಧಗಳು ಚಿಗಿಯುವುದು ಹೇಗೆ" **(ಗಜಲ್ 3 ಮತ್ಲ).** *ಸಗರನಾಡಿನ ಕವಿರತ್ನನಿಗೆ ನಮನ ಗೀತಾಂಜಲಿ ಕಾವ್ಯದ ಮಧುರನಾದಕ್ಕೆ ಮರಳಾಗಿ ಹೋದ ಶರಣ, 'ಸಗರನಾಡಿನ ಬೇಂದ್ರೆ' ಎಂದೇ ಖ್ಯಾತರಾದ.

ಸುರಪುರದ ಕವಿ ಅರಳಿಗಿಡದ ಕೃಷ್ಣ ಸರ್ ಅವರ ಕುರಿತಾದ ಗಜಲ್ ಸಾಮಾಜಿ-ಕ ಅಸಮಾನತೆ ಹಾಗೂ ವ್ಯಸನಗಳು ಹೊಟ್ಟೆ ತುಂಬಿದವರಿಗೆ ಉಣಿಸುವುದನ್ನು ನಿಲ್ಲಿಸಿ, ಹಸಿದವರಿಗೊಂದಿಷ್ಟು ಇರುವುದನ್ನು ಬಡಿಸಿ (ಗಜಲ್ 57); ಗುಟ್ಕಾ ತಿಂದು ಮಟಕ ಆಡಿ ಮನೆ ಮಠ ಮಾರಿಕೊಂಡವರ ಹಾಗೂ ಆಸ್ತಿ ಹರಾಜು ಮಾಡಿಕೊಂಡವರ ದುಸ್ಥಿತಿ ಗ್ರಾಮೀಣದ ಆಡುಭಾಷೆಯಲಿ ಹೆಣೆದಿದ್ದಾರೆ (ಗಜಲ್ 54). ವ್ಯವಸ್ಥೆಯ ವೈಪರೀತ್ಯ ನ್ಯಾಯದೇವತೆ ಮುಂದೆ ಬಹಳ ಒಪ್ಪಂದಗಳು ನಡೆದಿರುವುದು ಹಾಗೂ ಶರಣನ ಮಾತು ನಡೆಯಲಾರದ ನಾಣ್ಯವಾಗಿರುವುದನ್ನು ಕವಿ ಕಂಡಿದ್ದಾರೆ.

ಮೌಲ್ಯಗಳ ಅಧಃಪತನ "ಪರದೇಸಿ ನಾಯಿಯ ಜೊತೆ ಮಲಗಿಕೊಳ್ಳುವುದೇ ನಾಗ-ರಿಕತೆಯಾಗಿದೆ. ಮುಪ್ಪಿನ ತಾಯಿಯನ್ನು ಈಗ ಆಶ್ರಮಗಟ್ಟುವುದೇ ನಾಗರಿಕತೆಯಾಗಿದೆ." ಇಂದಿನ ಕೃತಕ ನಾಗರಿಕತೆಯನ್ನು ಕವಿ ಬೆತ್ತಲು ಮಾಡಿರುವರು ಮಾರ್ಗದರ್ಶನ "ಶಾಂತಿಯ ನಾಡಿನಲ್ಲಿ ಕ್ರಾಂತಿಯ ಗೀತೆ ಹಾಡಬೇಕಾಗಿದೆ ಈಗ ಬುದ್ಧ ಬಸವ ಅಲ್ಲಮರ ತತ್ವಗಳನ್ನು ಪಾಲಿಸಬೇಕಾಗಿದೆ ಈಗ." ನಾಲ್ಕು, ಐದು, ಆರು, ಏಳು ಹಾಗೂ ಎಂಟು ಅಶೇರ್‌ಗಳನ್ನು ಹೊಂದಿರುವ 60 ಗಜಲ್ ಗಳ ಈ ಸಂಕಲನವು ತಾಯಿಯ ಮಮತೆ, ತಂದೆಯ ಪ್ರೇಮ, ಸಖಿಯ ಪ್ರೀತಿ-ಪ್ರೇಮ-ಪ್ರಣಯ, ವಿರಸ, ವಿಶಾಧ, ಸಂಗಾತಿಯ ಒಲವಿನೊಟ್ಟಿಗೆ ಕರೋನಾ ಕಾಲದ ಸಾಂಕ್ರಾಮಿಕದ ಅರಾಜಕತೆಯಂತಹ ವಾಸ್ತವದ ಚಿತ್ರಣವನ್ನೂ ಓದುಗರ ಕಣ್ಮುಂದಿರಿಸುತ್ತದೆ.

ಇಡೀ ಕೃತಿಯನ್ನು ಅವಲೋಕಿಸಿದಾಗ "ಕಾಫಿಯಾಗಳನ್ನು ಇನ್ನಷ್ಟು ಸುಂದರವಾಗಿಸಬಹುದಿತ್ತುಹಾಗೆಯೇ ಮತ್ಲ ಹಾಗೂ ಮಖ್ತಾದಷ್ಟೆ ಉಳಿದ ಅಶೇರ್‌ಗಳು ಮೃದುಮಧುರ ಪದಗಳಿಂದ ಕಂಗೊಳಿಸಲೆಂದು ಆಶಿಸುವೆನು" ಶರಣಗೌಡ ಪಾಟೀಲ್ ಜೈನಾಪೂರು ಅವರ ಸಾಹಿತ್ಯ ಸೇವೆಯನು ಅರಸಿ' ಶಿಕ್ಷಕ ರತ್ನ, ಸಗರನಾಡಿನ ಕಲಾ ಬಂಧು, ಶಿಕ್ಷಣ ಇಲಾಖೆಯಿಂದ ಅತ್ಯುತ್ಯಮ ಉಪನ್ಯಾಸಕ ಮುಂತಾದ ಪ್ರಶಸ್ತಿಗಳು ಲಭಿಸಿವೆ. ಈ ಭಾವತರಂಗ' ಕ?ತಿಯು ಕೇವಲ ಗಜಲ್‌ಗಳ ಒಂದು ಸಾಂಪ್ರದಾಯಿಕ ಸಂಗ್ರಹವಲ್ಲ, ಅದು ನಮ್ಮ ಕಾಲದ ಸಾಮಾಜಿಕ, ಧಾರ್ಮಿಕ, ನೈತಿ-ಕ, ವಾಸ್ತವಿಕ ಹಾಗೂ ಮಾನಸಿಕ ಬಿಕ್ಕಟ್ಟುಗಳ ಸಮಗ್ರ ಚಿತ್ರಣವಾಗಿದೆ. ಸರಳ ಹಾಗೂ ಮೃದುಮಧುರ ಪದಗಳ ಮೂಲಕ ಬದುಕಿನ ಅತಿ ಗಂಭೀರವಾದ ದುಗದರ್ಶನವನ್ನು ಮಾಡಿಸುವಲ್ಲಿ ಕವಿ ಸಂಪೂರ್ಣ ಯಶಸ್ವಿಯಾಗಲಿ ಓದುಗರನ್ನು ಚಿಂತನೆಗೆ ಹಚ್ಚುವ, ಮೂಲಕ ಅಂತರಂಗದಿ ತಲ್ಲಣಗಳನ್ನು ಬಡಿದೆಬ್ಬಿಸುವ ಮತ್ತಷ್ಟು ಕೃತಿಗಳಿಂದ ಕನ್ನಡದ ಗಜಲ್ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಮೈಲಿಗಲ್ಲಾಗಿ ಸದಾ ಬೆಳಗಲೆಂದು ಆಶಿಸುವೆನು.



ಪಾರ್ವತಿ ಎಸ್ ಬೂದೂರು
ಯಾದಗಿರಿ ಜಿಲ್ಲೆ

## ಸದೃಡವಾದ ಮನಸ್ಸಿನಲ್ಲಿ ಸದೃಡ ದೇಹ ನಿರ್ಮಾಣ ಮಾಡಲು ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಭಾಗವಹಿಸಿ : ಚಂದ್ರಶೇಖರ ನುಗ್ಲಿ

# ವಲಯ ಮಟ್ಟದ ಕ್ರೀಡಾಕೂಟದಲ್ಲಿ ಎಚ್. ಡಿ ಪಾಟೀಲರ ವ್ಯಕ್ತಿತ್ವ ಬಣ್ಣನೆ

ಅ.ಶ. ಸುದ್ದಿ ಕುಕನೂರು

**ಕುಕನೂರು: ಸದೃಡವಾದ ಮನಸ್ಸಿನಲ್ಲಿ ಸದೃಡ ದೇಹ ನಿರ್ಮಾಣ ಮಾಡಲು ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಭಾಗವಹಿಸಬೇಕು. ಮಕ್ಕಳು ಕ್ರೀಡೆಯಲ್ಲಿ ಭಾಗವಹಿಸಿದಾಗ ಅವರಲ್ಲಿರುವ ಸೂಕ್ತ ಪ್ರತಿಭೆಯನ್ನು ಗುರುತಿಸಲು ಕ್ರೀಡೆಗಳು ಸಹಕಾರಿಯಾಗುತ್ತವೆ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷರಾದ ಚಂದ್ರಶೇಖರ್ ನುಗ್ಲಿ ಹೇಳಿದರು.**

ಅವರು ಕುಕನೂರು ತಾಲ್ಲೂಕಿನ ಭಟಪನಹಳ್ಳಿ ಗ್ರಾಮದ ಸರಕಾರಿ ಪ್ರಾಥ-ಮಿಕ ಶಾಲೆಯಲ್ಲಿ ಬಿನ್ನಾಳ ಹಾಗೂ ಕುಕನೂರು ಗ್ರಾಮೀಣ ವಲಯ ಮಟ್ಟದ ಹಿರಿಯ ಪ್ರಾಥ-ಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ಕ್ರೀಡಾ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿ ಮಕ್ಕಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿ-ಕೆಯಲ್ಲಿ ಪಾಲ್ಗೊಳ್ಳುವ ಮೂಲಕ, ಹಿರಿಯ ಕ್ರೀಡಾಪಟುಗಳಂತೆ ತಾವುಗಳು ಪ್ರೇರಣೆಪಡೆದು ತಾಲ್ಲೂಕ, ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಭಟಪನಹಳ್ಳಿ ಗ್ರಾಮದ ಡಾ.ಎಚ್.ಡಿ ಪಾಟೀಲರು ಕರ್ನಾಟಕ ಲೋಕ ಸೇವಾ ಆಯೋಗದಲ್ಲಿದ್ದಾಗ ಸಾಕಷ್ಟು ಬಡ ಜನ-



ರಿಗೆ ಉದ್ಯೋಗವಕಾಶ ಕೊಟ್ಟವರಾಗಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಗಳು ಕೇವಲ ಉದ್ಯೋಗಿಗಳಾಗದೇ ಉದ್ಯೋಗದಾತರಾಗಿ ಬೆಳೆಯಬೇಕು, ಜನ-ರಿಗೆ ಉದ್ಯೋಗ ನೀಡುವವರಾಗಬೇಕು ಎನ್ನುವ ಕನಸ್ಸನ್ನು ಹೊತ್ತಿರುವ ಪಾಟೀಲರು ಮನುಷ್ಯ ಬದುಕಿದಾಗ ಬದುಕುವುದು ಮುಖ್ಯವಲ್ಲಾ, ಸತ್ತ ಮೇಲು ಬದುಕುವ ಹಾಗೇ ಸಾಧನೆ ಮಾಡಬೇಕು ಎನ್ನುವ ಮನೋಭಿಪ್ರಾಯ ಹೊಂದಿದವರಾಗಿದ್ದಾರೆ. ಇಂತಹ ಪಾಟೀಲರು ಸಾಮಾಜಿ-ಕ ಚಿಂತನೆಯುಳ್ಳ ವ್ಯಕ್ತಿಗಳಾಗಿದ್ದು ಸಮಾಜದಲ್ಲಿ ಜೀವನ ಕಟ್ಟಿಕೊಳ್ಳುವವರಿಗೆ ಸದಾ ನೆರಳಾಗಿ ನಿಲ್ಲುವ ವ್ಯಕ್ತಿತ್ವ ಹೊಂದಿದವರಾಗಿದ್ದಾರೆ. ಹಿತ್ತಲ ಗಿಡ ಮದ್ದಲ್ಲ ಎಂಬಂತೆ ನಿಮ್ಮ ಗ್ರಾಮದಲ್ಲಿ ಇಂತಹ ವ್ಯಕ್ತಿಗಳು ಸಿಕ್ಕಿರುವುದು ನಿಮ್ಮ ಗ್ರಾಮದ ಪುಣ್ಯ ಎಂದರು.

ನಂತರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಶರಣಬಸನಗೌಡ ಪಾಟೀಲ್ ಮಾತನಾಡಿ ಕ್ರೀಡೆಯಲ್ಲಿ ಭಾಗವಹಿಸಿದ ಕ್ರೀಡಾಪಟುಗಳು ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಿ, ಸೋತವರು ಗೆದ್ದವರಿಗೆ ಶುಭ ಹಾರೈಸಬೇಕು ಎಂದರು. ಈ ವೇಳೆ ತಾಲ್ಲೂಕಾಧ್ಯಕ್ಷ ಮಹೇಶ ಸಬರದ ತಮ್ಮ ಅನಿಕೆ ಹಂಚಿಕೊಂಡರು.

ನಂತರ ಗ್ರಾಮದ ಮುಖಂಡರಾದ ಡಾ.ಎಚ್. ಡಿ ಪಾಟೀಲ್ ಮಾತನಾಡಿ ಇಂದು ನಮ್ಮ ಗ್ರಾಮದಲ್ಲಿ ನಡೆಯುತ್ತಿರುವ ಕ್ರೀಡಾಕೂಟಗಳು ಎಸ್. ಡಿ. ಎಮ್. ಸಿ ಅಧ್ಯಕ್ಷರ, ಸರ್ವ ಸದಸ್ಯರ ಹಾಗೂ ಗ್ರಾಮಸ್ಥರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿವೆ.

ಯಾವುದೇ ಕಾರ್ಯಕ್ರಮಗಳಿದ್ದರು ಗ್ರಾಮದ ಪ್ರತಿಯೊಬ್ಬ ಯುವಕರು, ಹಿರಿಯರು ಇಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಕಾರ್ಯಕ್ರಮ ಯಶಸ್ವಿಗೆ ಶ್ರಮಿಸುತ್ತಾರೆ ಇದು ನಮ್ಮ ಗ್ರಾಮದ ಹೆಮ್ಮೆಯ ವಿಷಯವಾಗಿದೆ ಎಂದರು. ಯಾವಾಗಲೂ ಪ್ರತಿಯೊಬ್ಬ ಶಿಷ್ಯರು ಮುಂದೆ ಇರಬೇಕು, ಹಿಂದೆ ಗುರುವಿರಬೇಕು. ಸದಾ ಗುರುಗಳ ಮಾರ್ಗದರ್ಶನ ಪ್ರತಿಯೊಬ್ಬ-ರಿಗೂ ಅವಶ್ಯಕವಾಗಿರಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಕ್ರೀಡೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ಶ್ರಮದಿಂದ ಸಾಧನೆ ಮಾಡುವವರಾಗಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದ ನಂತರದಲ್ಲಿ ಎಚ್. ಡಿ ಪಾಟೀಲ್ ಅವರ ನಿವಾಸದಲ್ಲಿ ಸರಕಾರಿ ಶಾಲಾ ಮಕ್ಕಳ ಉತ್ತಮ ಶಿಕ್ಷಣ ಹಾಗೂ ಭೋದನೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಹಾಗೂ ಶಾಲಾ ಮುಖ್ಯಶಿಕ್ಷಕರಿಗೆ, ಹಾಗೂ ಸಹ ಶಿಕ್ಷಕ-ರಿಗೆ ಭೋದನೆಯಲ್ಲಿ ಹಿಂದುಳಿಯದಂತೆ ಮತ್ತು ಶಿಕ್ಷಕರಿಗೆ ಸರಕಾರ ವಿವಿಧ ಕೆಲಸ, ಕಾರ್ಯಗಳ ಒತ್ತಡ ಹೇರುವುದರಿಂದ ಮಕ್ಕಳಿಗೆ ಶಿಕ್ಷಣ ಹಿಂದುಳಿಯುತ್ತಿರುವುದರ ಕುರಿತು ರಾಜ್ಯಾಧ್ಯಕ್ಷ ಚಂದ್ರಶೇಖರ್ ಅವರೊಂದಿಗೆ ಚರ್ಚಿಸಲಾಯಿತು.

ಮುಂದಿನ ದಿನಗಳಲ್ಲಿ ಶಾಲಾ ಶಿಕ್ಷಕ-ರಿಗೆ ಸರಕಾರದ ಹೊರೆ ಕೆಲಸಗಳನ್ನು ತಪ್ಪಿಸಿ ಮಕ್ಕಳ ವ್ಯಾಸಾಂಗಕ್ಕೆ ಹೆಚ್ಚು ಒತ್ತು, ನೀಡುವ ಮೂಲಕ ಮಕ್ಕಳ ಶ್ರೇಯೋಭಿವೃದ್ಧಿಗೆ ಮಹತ್ವ ನೀಡಲು ಶಿಕ್ಷಕರೊಂದಿಗೆ ಚರ್ಚೆ ಮಾಡಲಾಯಿತು. ನಂತರ ಶಿಕ್ಷಕರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಶಿಕ್ಷಕ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹನುಮಂತಪ್ಪ ಕುರಿ, ಮಾರುತೇಶ್ವರ ತಳವಾರ, ಬಸವರಾಜ ಬೆಲ್ಲದ್, ಫಕೀರಪ್ಪ ಪೊತುಂಡಿ, ಗ್ರಾಮದ ಪ್ರಮುಖರಾದ ಕೆಂಚಪ್ಪ ನಡುವಲಮನಿ, ರಾಯಪ್ಪ ವಾಲಿಕಾರ, ಮಲ್ಲಪ್ಪ ಗುಡಿಹಿಂದಲ್, ಶರಣಪ್ಪ ಹಾದಿಮನಿ, ಹಂಚ್ಯಾಳಪ್ಪ ಕಲ್ಗುಡಿ, ಪರಸನ್ನ ಹೊಸ್ಮನಿ, ವೀರಯ್ಯ ಭದ್ರಪೂರ, ಮಹೇಶ ದೊಡ್ಮನಿ ಸೇರಿದಂತೆ ಎಸ್ ಡಿ, ಎಮ್. ಸಿ ಅಧ್ಯಕ್ಷರು, ಸದಸ್ಯರು, ಶಿಕ್ಷಕರು, ಗ್ರಾಮದ ಹಿರಿಯರು, ಯುವಕರು ಸೇರಿದಂತೆ ಇನ್ನೀತರರು ಇದ್ದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ದೈಹಿಕ ಶಿಕ್ಷಕ ಶರಣಪ್ಪ ಮಾತನಾಡಿದರು. ಮುಖ್ಯ ಶಿಕ್ಷಕಿ ಸಾಧಿಕ ಉಮಚಗಿ ಸ್ವಾಗತಿಸಿದರು. ಶ್ರೀಧರ ಹೊಸ್ಮನಿ ನಿರೂಪಿಸಿದರು, ಬೇಬಿರೇಖಾ ವಂದಿಸಿದರು.

## ಪರಿಸರ ಸ್ನೇಹಿ ಮಣ್ಣಿನ ಗಣಪತಿ ಬಳಸಿ ಪರಿಸರ ಉಳಿಸಿ: ರಾಮರೆಡ್ಡಿ ಪಾಟೀಲ್,

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಗಣೇಶ ಚತುರ್ಥಿ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರು ಪರಿಸರ ಸ್ನೇಹಿ ಮಣ್ಣಿನ ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಮೂಲಕ ಪರಿಸರ ಸಂರಕ್ಷಣೆಗೆ ಕೈಜೋಡಿಸಬೇಕು ಎಂದು ಗಂಗಾವತಿ ನಗರಸಭೆಯ ಪ್ರಭಾರಿ ಪೌರಾಯುಕ್ತ ರಾಮರೆಡ್ಡಿ ಪಾಟೀಲ್ ಮನವಿ ಮಾಡಿದರು.**



ನಗರ ಹಾಗೂ ತಾಲ್ಲೂಕಿನಾದ್ಯಂತ ಗಣೇಶ ಹಬ್ಬವನ್ನು ಭಕ್ತಿಭಾವದಿಂದ ಆಚರಿಸುವ ಸಂದರ್ಭದಲ್ಲಿ ಪ್ಲಾಸ್ಟರ್ ಆಫ್ ಪ್ಯಾರಿಸ್ ಹಾಗೂ ರಾಸಾಯನಿಕ ಬಣ್ಣಗಳಿಂದ ತಯಾ-ರಿಸಿದ ಗಣಪತಿ ಮೂರ್ತಿಗಳ ಬಳಕೆಯನ್ನು ಕೈಬಿಟ್ಟು, ನೈಸರ್ಗಿಕ ಮಣ್ಣಿನಿಂದ ತಯಾರಿಸಿದ ಪರಿಸರ ಸ್ನೇಹಿ ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕು. ಇದ-ರಿಂದ ಗಣಪತಿ ಮೂರ್ತಿಗಳ ವಿಸರ್ಜನೆಯ ಸಂದರ್ಭದಲ್ಲಿ ಕೆರೆ, ಹಳ್ಳ, ನದಿ ಸೇರಿದಂತೆ ಜಲಮೂಲಗಳು ಕಲುಷಿತವಾಗುವುದನ್ನು ತಡೆಯಲು ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು. ಹಬ್ಬದ ಸಂದರ್ಭದಲ್ಲಿ ಪರಿಸರಕ್ಕೆ ದುಷ್ಪರಿಣಾಮ ಬೀರುವ ವಸ್ತುಗಳ ಬಳಕೆಯನ್ನು ಕಡಿಮೆ ಮಾಡಿ, ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಗಣೇಶ ಹಬ್ಬವನ್ನು ಪರಿಸರ ಸ್ನೇಹಿಯಾಗಿ ಆಚರಿಸುವ ಮೂಲಕ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕು ಎಂದು ರಾಮರೆಡ್ಡಿ ಪಾಟೀಲ್ ಹಾಗೂ ನಗರಸಭೆಯ ಆರೋಗ್ಯ ನಿರೀಕ್ಷಣಾಧಿಕಾರಿ ನಾಗರಾಜ ಮನವಿ ಮಾಡಿದರು.

## ಶ್ರಾವಣ ಮಂಗಳವಾರ ಮಹಿಷಾಸುರ ಮರ್ದಿನಿ ದೇವಿಗೆ ವಿಶೇಷ ಪೂಜೆ

ಅ.ಶ. ಸುದ್ದಿ ಕನಕಗಿರಿ

**0ಕನಕಗಿರಿ: ಶ್ರಾವಣ ಮಾಸದ ಮಂಗಳವಾರದ ಅಂಗವಾಗಿ ಪಟ್ಟಣದ ಶ್ರೀ ಮಹಿಷಾಸುರ ಮರ್ದಿನಿ ದೇವಾಲಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮವನ್ನು ಭಕ್ತಿಭಾವದಿಂದ ನೆರವೇರಿಸಲಾಯಿತು. ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ದೇವಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ಪುಷ್ಪಾರ್ಪಣೆ, ವಿವಿಧ ಧಾರ್ಮಿಕ ವಿಧಿವಿಧಾನಗಳು, ವಿಶೇಷ ಪೂಜೆ ಹಾಗೂ ಅಲಂಕಾರ ಕಾರ್ಯಕ್ರಮಗಳು ಜರುಗಿದವು.**



ವಿಶೇಷ ಪೂಜೆಯಲ್ಲಿ ಸ್ಥಳೀಯ ಭಕ್ತರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ದೇವಿಯ ಆಶೀರ್ವಾದ ಪಡೆದರು. ಪೂಜಾ ಕಾರ್ಯಕ್ರಮದ ಬಳಿಕ ಭಕ್ತಾದಿಗಳಿಗೆ ಕಮಿಟಿ ಅವ-ರಿಂದ ಅನ್ನ ಪ್ರಸಾದ ವಿತರಿಸಲಾಯಿತು. ಭಕ್ತರು ಅನ್ನ ಪ್ರಸಾದ ಸ್ವೀಕರಿಸಿ ದೇವಿಯ ಕೃಪೆಗೆ ಪಾತ್ರರಾದರು. ಶ್ರಾವಣ ಮಾಸದ ಹಿನ್ನೆಲೆಯಲ್ಲಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯುತ್ತಿರುವುದು ಭಕ್ತರಲ್ಲಿ ಭಕ್ತಿ ಭಾವ ಸಂತಸ ಮೂಡಿಸಿದೆ.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಸಚಿವರಾದ ಶಿವರಾಜ್ ತಂಗಡಗಿ ಅವರ ಮೇಲಿನ ಆರೋಪಗಳು ನಿರಾಧಾರ

# ಬಿಜೆಪಿಗರ ಸೊಕ್ಕಿನ ಮಾತುಗಳಿಗೆ ಉತ್ತರ ಸಿಗುವ ಕಾಲ ಹತ್ತಿರದಲ್ಲಿದೆ

**ಕಾರಟಗಿ: ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷರಾದ ಬಿ ವೈ ವಿಜಯೇಂದ್ರ ಅವರು ಲಿಂಗಸೂರಿನಿಂದ ಬಳ್ಳಾರಿ ವರೆಗೆ ಪಾದಯಾತ್ರೆ ಮೂಲಕ ರಾಜ್ಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಆಡಳಿತ ವೈಫಲ್ಯಗಳನ್ನೂ ಅಧಿಕಾರ ದುರುಪಯೋಗವನ್ನು ಜನರ ಮುಂದಿಡುತ್ತಿದ್ದೇವೆ ಎಂದು ಬಳ್ಳಾರಿ ಚಲೋ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.**

ರೈತರ ಬಂದು ಹೊಲಕ್ಕ ನೀರು ಕೇಳಿದರೆ ಎಲ್ಲಿ ಎಲ್ಲಿಯಾವಪ್ಪ ನೀರು ನಾನು ತಂದು ಹಾಕಲಾ ನೀರು ಅಂತಿದ್ದೀರಂತೆ,ಯಣ್ಣಾ ಚಿಂತಿ ಮಾಡಬೇಡ ಈ ಭಾಗದ ರೈತರು ಕೊಡದಾಗ ತಂದು 2028 ಕ್ಕೆ ನಿನಗೆ ನೀರು ಹಾಕೇ ಹಾಕ್ತಾರೆ, ನೀವೆಲ್ಲಾ ಸೇರಿ ನಮ್ಮ ದಲಿತರ ವಾಲ್ಮೀಕಿ ನಿಗಮದ 187 ಕೋಟಿ ತಿಂದಿರಲ್ಲ ಎಂದು ಬಿಜೆಪಿಯ ರಾಜೂಗೌಡ ಆರೋಪಿದ್ದು ಕಾಂಗ್ರೆಸ್ ಪಕ್ಷದ ಜನಗಳ ನಿದ್ದೆಗೆಡಿಸಿದೆ ಈ ಕುರಿತು ಕಾರಟಗಿ ಬ್ಲಾಕ್ ಕಾಂಗ್ರೆಸ್ ಮುಖಂಡರು ಸಚಿವ ಶಿವರಾಜ್ ಎಸ್ ತಂಗಡಗಿ ಅವರ ಗೃಹ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಬಿಜೆಪಿ ಪಾದಯಾತ್ರೆಯ ರೂವಾರಿಗಳಿಗೆ ಮತ್ತು ಬಿಜೆಪಿ ಮುಖಂಡರಿಗೆ ತಿರುಗೇಟು ನೀಡಿದ್ದಾರೆ.

ಬ್ಲಾಕ್ ಅಧ್ಯಕ್ಷರಾದ ಶರಣೇಗೌಡ ಮಾಲಿ ಪಾಟೀಲ್ ಅವರು ತೀಕ್ಷ್ಣವಾಗಿ ಮಾತುಗಳ ಮೂಲಕ ಬಿಜೆಪಿಯವರಿಗೆ ತಿವಿದಿದ್ದಾರೆ, ಬಿಜೆಪಿ ಅವರು ಮಾಡುತ್ತಿರುವ ಬಳ್ಳಾರಿ ಚಲೋ ಅದೊಂದು ಹತಾಶಯ ಪಾದಯಾತ್ರೆಯಾಗಿದೆ, ಮಹರ್ಷಿ ವಾಲ್ಮೀಕಿ ನಿಗಮದ ಹಗರಣದ ಬಗ್ಗೆ ತನಿಖಾ ತಂಡ ಈಗಾಗಲೇ ಕ್ಲೀನ್ ನೀಡಿದೆ, ಆದ-ರೆ ಬಿಜೆಪಿ ಶಾಸಕರು ವಿಧಾನ ಸೌಧ ಸಧನದೊಳಗೆ ನಿಗಮದ ಹಗರಣ ಹೆಸರಲ್ಲಿ ಕಾಲಹರಣ ಮಾಡುವ ಮೂಲಕ ರಾಜ್ಯದ ಜನರ ಹಿತ ಶಕ್ತಿಯನ್ನು ಬದಿಗೊತ್ತಿದ್ದಾರೆ ಸದನದೊಳಗೆ ರಾಜ್ಯದ ಜನರ ಬೇಕು ಬೇಡಿಕೆಗಳ ಪೂರಕ ಯೋಜನೆಗಳ ವಿಚಾರಗಳ ಪ್ರಸ್ತಾಪಿಸುವ ಅಮೂಲ್ಯವಾದ ಸಮಯವನ್ನು ಹಾಳು ಮಾಡಿದ್ದಾರೆ.

ಈ ಕುರಿತು ಬಿಜೆಪಿಯವರು ರಾಜ್ಯದ ಜನರ ಕ್ಷಮೆ ಕೇಳಬೇಕು, ಸರ್ಕಾರಕ್ಕೆ ಮುಜುಗರ ಆಗಬಾರದೆನ್ನುವ ಒಂದೇ ಒಂದು ಉದ್ದೇಶದಿಂದ ನಾಗೇಂದ್ರ



ಅವರು ರಾಜೀನಾಮೆ ನೀಡಿದ್ದಾರೆ ಹೊರತು ಅವರು ತಪ್ಪು ಮಾಡಿಲ್ಲ, ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಬಿಜೆಪಿ ನಾಯಕರ ಒಳ ಬೇಗುದಿ ಮರೆಮಾಚಲು ಈ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ ಜನರ ಕಲ್ಯಾಣ-ಕ್ಕಾಗಿ ದೀನ ದಲಿತರ ಉದ್ಧಾರಕ್ಕಾಗಿ ಅಲ್ಲ, ಪಾದಯಾತ್ರೆ ಉದ್ದಕ್ಕೂ ಹೇಳುತ್ತಿದ್ದಾರೆ ಕಾಂಗ್ರೆಸ್ ಪಕ್ಷ ಹಗರಣ ಮಾಡಿದೆ ಎಂದು ಬಡವರ ಮತ್ತು ರಾಜ್ಯದ ಜನರ ಕಲ್ಯಾಣ ಮಾಡಿದ್ದು ಯಾವುದಾದರೂ ಒಂದು ಪಕ್ಷ ಇದ್ದರೆ ಅದು ಕಾಂಗ್ರೆಸ್ ಪಕ್ಷ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಬಿಜೆಪಿಯವರಿಗಿಲ್ಲ, ಭ್ರಷ್ಟಾಚಾರದ ಬೇರು ಬಿಜೆಪಿಯದ್ದಾಗಿದೆ, ವಿಜಯೇಂದ್ರದ್ದಾಗಿದೆ, ಚೆಕ್ ಮೂಲಕ ಭ್ರಷ್ಟಾಚಾರ ಮಾಡಿ ಅವರ ತಂದೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಜೈಲಿಗೆ ಕಳಿಸಿದ ಕೀರ್ತಿ ವಿಜಯೇಂದ್ರ ಅವರಿಗೆ ಸಲ್ಲುತ್ತದೆ, ಸನ್ಮಾನ್ಯ ಶಿವರಾಜ್ ತಂಗಡಗಿ ಅವರು ಇಲ್ಲದಿದ್ದರೆ ನಿಮ್ಮ ತಂದೆ ಯಡಿಯೂರಪ್ಪ ಸಿಎಂ ಆಗುತ್ತಿರಲಿಲ್ಲ ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ರಾಜ್ಯಾಧ್ಯಕ್ಷರಾದ ವಿಜಯೇಂದ್ರ ಅವರಿಗೆ ತಿರುಗೇಟು ನೀಡಿದ್ದಾರೆ.

ನಂತರ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಶಿವಾರೆಡ್ಡಿ ನಾಯಕ ಅವರು ಮಾತನಾಡಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಮೀಸಲಾತಿಯ ಪರ್ಸೆಂಟೇಜ್ (% ಶೇಕಡವಾರು ) ಮೀಸಲಾತಿ ಕಡಿಮೆ ಮಾಡಿರುವ ಬಗ್ಗೆ ಕಾಂಗ್ರೆಸ್ ಕಡೆ ಬೆರಳು ಮಾಡಿ ತೋರಿಸುವ ಬಿಜೆಪಿಯವರ ಆರೋಪ ನಿರಾಧಾರ, ಮೀಸಲಾತಿಯ ಶೇಕಡವಾರು ಕು-ರಿತು ಈಗಾಗಲೇ ಸುಪ್ರೀಂ ಕೋರ್ಟ್ ನಲ್ಲಿ ತಡೆಯಾಜ್ಞೆ ಇರುವುದರಿಂದ ಮೊದಲಿನಂತೆ ಮೀಸಲಾತಿ ಮುಂದುವರೆದಿದೆ ಹೊರತು ಕಾಂಗ್ರೆಸ್ ಪಕ್ಷ ಮೀಸಲಾತಿಯನ್ನು ಕಡಿಮೆ ಮಾಡಿಲ್ಲ, ಕೇಂದ್ರದಲ್ಲಿರುವ ಬಿಜೆಪಿಯವರು ಮನಸು ಮಾಡಿದರೆ ಮೀಸಲಾತಿಯನ್ನು ಹೆಚ್ಚಿಗೆ ಮಾಡುವ ಅವಕಾಶ ಇದೆ, ಆದರೆ ಅದನ್ನು ಮಾಡುವುದು ಬಿಟ್ಟು ಸುಳ್ಳು ಆರೋಪಗಳನ್ನು ಕಾಂಗ್ರೆಸ್ ಪಕ್ಷದ ಮೇಲೆ ಮಾಡುವ ಮೂಲಕ ಜನರಿಗೆ ತಪ್ಪು ಸಂದೇಶವನ್ನು ನೀಡುತ್ತಿದ್ದಾರೆ,

ಬಿಜೆಪಿ ಪಕ್ಷದವರು ನಾವು ರೈತರ ಪರ ಅಂತಿದ್ದಾರೆ ನಿಮ್ಮ ಆಡಳಿತ ಅವಧಿಯಲ್ಲಿ ರೈತರನ್ನು ಯಾವ ರೀತಿ ನಿರ್ಲಕ್ಷ ವಹಿಸಿದ್ದೀರಿ ಎನ್ನುವುದು ರೈತರಿಗೆ ಗೊತ್ತಿದೆ ಸಚಿವರಾದ ಶಿವರಾಜ್ ತಂಗಡಗಿ ಅವರು ರೈಸ್ ಪಾರ್ಕ್ ಯೋಜನೆ ಅನುಷ್ಠಾನಗೊಳಿಸಿದರು ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗಬೇಕು ಎನ್ನುವ ಉದ್ದೇಶದಿಂದ ಈಗಾಗಲೇ ನೂರಾರು ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಿ ರೈತರ ಬದುಕಿಗೆ ಆಶಾಕಿರಣವಾಗಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣವಾಗಿದೆ,

ಮುಂದಿನ ದಿನದಲ್ಲಿ ಅದನ್ನು ಪ್ರಾರಂಭ ಮಾಡುವ ಸೌಭಾಗ್ಯವೂ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ದೊರೆಯಲಿದೆ,

ಬರಗಾಲದ ಒಣ ಬೇಸಾಯ ಮಾಡುವ ರೈತರಿಗೆ ನೀರು ಒದಗಿಸಿದ ಕೀರ್ತಿ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಸಲ್ಲುತ್ತದೆ, ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಮೂಲಕ ಬರಡು ಭೂಮಿಯಲ್ಲಿ ಹಸಿರು ಚಿಲುಮೆ ಅರಳಿಸಿದ ಕೀರ್ತಿ ಸನ್ಮಾನ್ಯ ಶಿವರಾಜ್ ತಂಗಡಗಿ ಅವ-ರಿಗೆ ಸಲ್ಲುತ್ತದೆ, ಕೊನೆ ಭಾಗದ ರೈತರಿಗೆ ಹೊಳೆಯ ನೀರು ಕೊಡಲು ಏತ ನೀರಾವರಿ ಯೋಜನೆ ಮೂಲಕ ರೈತರ ಭೂಮಿಗಳಿಗೆ ನೀರು ಒದಗಿಸಿದ ಕೀರ್ತಿ ಸನ್ಮಾನ್ಯ ಶಿವರಾಜ್ ತಂಗಡಗಿ ಅವರಿಗೆ ಸಲ್ಲುತ್ತದೆ, ಇನ್ನು ತುಂಗಭದ್ರಾ ಜಲಾಶಯದ ಗೇಟ್ ರಿಪೇರಿ ಸಂದರ್ಭದಲ್ಲಿ ಇಡಿ ಸರ್ಕಾರ ಆಡಳಿತ ವರ್ಗವನ್ನೇ ಜಲಾಶಯದ ಹತ್ತಿರ ನಿಲ್ಲಿಸಿ, ಅತಿ ಕಡಿಮೆ ಅವಧಿಯಲ್ಲಿ ಗೇಟ್ ರಿಪೇರ್ ಮಾಡಿ ರೈತರಿಗೆ ನೀರು ಕೊಟ್ಟ ಕೀರ್ತಿ ಸನ್ಮಾನ್ಯ ಶಿವರಾಜ್ ತಂಗಡಗಿ ಅವರಿಗೆ ಸಲ್ಲುತ್ತದೆ, ಅಭಿವೃದ್ಧಿ ಮಾಡಿದವರ ಪರ ಕ್ಷೇತ್ರ ಜನಗೆ ಇದ್ದಾರೆ ಆ ಕಾರಣಕ್ಕಾಗಿ ಸನ್ಮಾನ್ಯ ಶಿವರಾಜ್ ತಂಗಡಗಿ ಅವರನ್ನು ಜನರು ಗೆಲ್ಲಿಸುತ್ತಿದ್ದಾರೆ, ಅಭಿವೃದ್ಧಿಪರ ಜನರ ಪರ ಇಲ್ಲದಿದ್ದರೆ ಜನ ಯಾಕೆ ಆಯ್ಕೆ ಮಾಡುತ್ತಾರೆ ? ಇದನ್ನು ಬಿಜೆಪಿಯವರ ಅರ್ಥಮಾಡಿಕೊಳ್ಳಬೇಕು, ಉದ್ದೇಶಪೂರ್ವಕವಾಗಿ ಸಚಿವರ ಹೆಸರಿಗೆ ಕಳಂಕ ತರಲು ಸೊಕ್ಕಿನ ಮಾತುಗಳಾಡುವವರು ಮುಂದೆ ಅನುಭವಿಸುತ್ತಾರೆ ಎಂದು ಖಾರವಾಗಿ ತಿರುಗೇಟು ನೀಡಿದ್ದಾರೆ.

> **“ ಬಿಜೆಪಿ ಪಕ್ಷದವರು ನಾವು ರೈತರ ಪರ ಅಂತಿದ್ದಾರೆ ನಿಮ್ಮ ಆಡಳಿತ ಅವಧಿಯಲ್ಲಿ ರೈತರನ್ನು ಯಾವ ರೀತಿ ನಿರ್ಲಕ್ಷ ವಹಿಸಿದ್ದೀರಿ ಎನ್ನುವುದು ರೈತರಿಗೆ ಗೊತ್ತಿದೆ ಸಚಿವರಾದ ಶಿವರಾಜ್ ತಂಗಡಗಿ ಅವರು ರೈಸ್ ಪಾರ್ಕ್ ಯೋಜನೆ ಅನುಷ್ಠಾನಗೊಳಿಸಿದರು ರೈತರ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗಬೇಕು ಎನ್ನುವ ಉದ್ದೇಶದಿಂದ ಈಗಾಗಲೇ ನೂರಾರು ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಿ ರೈತರ ಬದುಕಿಗೆ ಆಶಾಕಿರಣವಾಗಿ ರೈಸ್ ಟೆಕ್ನಾಲಜಿ ಪಾರ್ಕ್ ನಿರ್ಮಾಣವಾಗಿದೆ.**



# ಹೃದಯ ಆರೋಗ್ಯ ಕಾಳಜಿಗೆ 'ಸ್ಫೂರ್ತಿ'ಯಿಂದ ಇಂದು ಉಚಿತ ತಪಾಸಣಾ ಶಿಬಿರ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ಎಸ್.ಡಿ.ಎಂ.ನಾರಾಯಣ ಹಾರ್ಟ್ ಸೆಂಟರ್ ಧಾರವಾಡ ಮತ್ತು ನಗರದ ವಿದ್ಯಾನಗರ, ರಾಯಚೂರು ರಸ್ತೆಯಲ್ಲಿರುವ ಸ್ಫೂರ್ತಿ ಆಯುರ್ವೇದಿಕ ಮೆಡಿಕಲ್ ಕಾಲೇಜು ಮತ್ತು ಡಾ. ಎಸ್.ವಿ. ಸವಡಿ ಆಯುರ್ವೇದಿಕ ಆಸ್ಪತ್ರೆ** ಇವರ ಸಹಯೋಗದಲ್ಲಿ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಉಚಿತ ಹೃದಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ.**

ಶಿಬಿರವು ಸೆಪ್ಟೆಂಬರ್ 8, 2026ರ ಮಂಗಳವಾರ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆಯವರೆಗೆ ನಡೆಯಲಿದೆ.




ಶಿಬಿರದಲ್ಲಿ ಹೃದಯ ಸಂಬಂಧಿತ ಆರೋಗ್ಯ ತಪಾಸಣೆ ಹಾಗೂ ಅಗತ್ಯ ವೈದ್ಯಕೀಯ ಸಲಹೆಗಳನ್ನು ಉಚಿತವಾಗಿ ನೀಡಲಾಗುವುದು. ಹೃದಯ ಸಂಬಂಧಿತ ಸಮಸ್ಯೆಗಳಿರುವವರು, ರಕ್ತದೊತ್ತಡ, ಮಧುಮೇಹ ಸೇರಿದಂತೆ ಹೃದಯ ಆರೋಗ್ಯದ ಬಗ್ಗೆ ಕಾಳಜಿ ಹೊಂದಿರುವ ಸಾರ್ವಜನಿಕರು ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಆಯೋಜಕರು ಮನವಿ ಮಾಡಿದ್ದಾರೆ ಸ್ಫೂರ್ತಿ ಆಯುರ್ವೇದಿಕ ಮೆಡಿಕಲ್ ಕಾಲೇಜು ಮತ್ತು ಡಾ. ಎಸ್.ವಿ. ಸವಡಿ ಆಯುರ್ವೇದಿಕ ಆಸ್ಪತ್ರೆ, ವಿದ್ಯಾನಗರ, ರಾಯಚೂರು ರಸ್ತೆ, ಗಂಗಾವತಿ. ದಿನಾಂಕ: 08-09-2026, ಮಂಗಳವಾರ ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆಶಿಬಿರ: ಸಂಪೂರ್ಣ ಉಚಿತ

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka